Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 10
October - 2026



"ಸಹಕಾರ ಕ್ಷೇತ್ರದಲ್ಲಿ ನಡೆಯುವ ನೇಮಕಾತಿಗಳಲ್ಲಿ ಪದವೀಧರರಿಗೆ ಅವಕಾಶ ಕಲ್ಪಿಸುವ ಹಾಗೂ ಎಂಬಿಎ, ಬಿಬಿಎ ಹಾಗೂ ಬಿಕಾಂ ಪದವೀಧರರಿಗೆ ಆರು ತಿಂಗಳ ಕಾಲ ಲೆಕ್ಕ ಪರಿಶೋಧನೆ ತರಬೇತಿ ನೀಡಿ, ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಗೆ ಅವಕಾಶ ಕಲ್ಪಿಸುವ ಉದ್ದೇಶವಿದೆ."

-ಲಕ್ಷ್ಮಣ ಎಸ್. ಸವದಿ, ಸಹಕಾರ ಸಚಿವರು

ಅಕ್ಟೋಬರ್ 21
ವಿಜಯದಶಮಿ



ಅಕ್ಟೋಬರ್ 02
ಮಹಾತ್ಮ ಗಾಂಧಿ ಮತ್ತು
ಲಾಲ್ ಬಹದ್ದೂರ್ ಶಾಸ್ತ್ರೀ ಜನ್ಮ ದಿನಾಚರಣೆ



ಅಕ್ಟೋಬರ್ 16
ಸರಸ್ವತಿ ಪೂಜೆ



ಅಕ್ಟೋಬರ್ 26
ವಾಲ್ಮೀಕಿ ಜಯಂತಿ



ಸೌಹಾರ್ದ ಸಹಕಾರಿಗಳ ಸಂಖ್ಯೆ: 6852

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1763



ಜಿ. ನಂಜನಗೌಡ

> ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಹಾಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು. ಒಂದು ದೇಶ, ಒಂದು ಸಂಸ್ಥೆ, ಹಾಗೂ ಒಂದು ಸಹಕಾರ ಸಂಸ್ಥೆಯ ಉತ್ತಮ ಕಾರ್ಯನಿರ್ವಹಣೆಯಲ್ಲಿ ನಾಯಕತ್ವ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಹಲವಾರು ಉತ್ತಮ ಸಹಕಾರ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆಯನ್ನು ಕಾಣುತ್ತೇವೆ

# ಸಹಕಾರಿ ನಾಯಕತ್ವ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಹಾಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು. ಒಂದು ದೇಶ, ಒಂದು ಸಂಸ್ಥೆ ಹಾಗೂ ಒಂದು ಸಹಕಾರ ಸಂಸ್ಥೆಯ ಉತ್ತಮ ಕಾರ್ಯನಿರ್ವಹಣೆಯಲ್ಲಿ ನಾಯಕತ್ವ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಹಲವಾರು ಉತ್ತಮ ಸಹಕಾರ ಸಂಸ್ಥೆಗಳ ಉತ್ತಮ ಕಾರ್ಯನಿರ್ವಹಣೆಯನ್ನು ಕಾಣುತ್ತೇವೆ. ಈ ಪ್ರಗತಿಗೆ ಆಯಾ ಸಂಸ್ಥೆಗಳ ನಾಯಕತ್ವವೇ ಬಹುಪಾಲು ಕಾರಣ. ಇದನ್ನೆ ನಾವೂ ಕುಟುಂಬಗಳಿಗೂ ಹೋಲಿಸಬಹುದು. ಮನೆಯ ಯಜಮಾನ ಕುಟುಂಬವನ್ನು ಉತ್ತಮವಾಗಿ ನಡೆಸುತ್ತಿದ್ದರೆ ಅವನು ಉತ್ತಮ ನಾಯಕತ್ವ ಗುಣ ಹೊಂದಿದ್ದಾನೆ ಎಂದು ಅರ್ಥೈಸಬಹುದು.

ನಾಯಕತ್ವ ಕೆಲವರಿಗೆ ಹುಟ್ಟಿನಿಂದ ಬಂದಿರುತ್ತದೆ. ಕೆಲವರಿಗೆ ಸಮಾಜ ಮುನ್ನಡೆಸುವ ಜವಾಬ್ದಾರಿ ಬಂದಾಗ ಬರುತ್ತದೆ. ಇನ್ನು ಕೆಲವರಿಗೆ ಕೆಲವು ಸನ್ನಿವೇಶಗಳಿಂದ ಅನಿವಾರ್ಯವಾಗಿ ನಾಯಕತ್ವವು ಲಭ್ಯವಾಗುತ್ತದೆ. ಯಾವುದೇ ಸಂದರ್ಭದಲ್ಲಿ ನಾಯಕತ್ವ ವಹಿಸಿಕೊಂಡವರು ಕೆಲವು ಗುಣಗಳನ್ನು ಹೊಂದಿರಬೇಕಾಗುತ್ತದೆ. ವಿಶೇಷವಾಗಿ ಸಹಕಾರಿ ಸಂಸ್ಥೆಗಳಲ್ಲಿ ನಾಯಕತ್ವವನ್ನು ವಹಿಸಿಕೊಂಡವರು, ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿ, ಸಹಕಾರಿ ತತ್ವಗಳ ಅರಿವು, ಸಹಕಾರಿ ಕಾನೂನು ಹಾಗೂ ನಿಯಮಗಳು, ಸಹಕಾರಿಯ ಉಪನಿಬಂಧನೆಗಳು, ಸಹಕಾರಿಯ ಕಾರ್ಯವ್ಯಾಪ್ತಿ ವಿಶೇಷವಾಗಿ ತನ್ನ ಕಾರ್ಯವ್ಯಾಪ್ತಿಗಳನ್ನು ತಿಳಿದುಕೊಂಡಿರುವುದು ಅವಶ್ಯಕ. ಸದಸ್ಯರೊಂದಿಗೆ, ಆಡಳಿತ ಮಂಡಳಿಯವರೊಂದಿಗೆ ಸಿಬ್ಬಂದಿಯವರೊಡನೆ, ಸಾಮಾನ್ಯ ವರ್ಗದ ಜನರೊಂದಿಗೆ ಹಾಗೂ ಸಂಬಂಧಿಸಿದ ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಎಲ್ಲರೊಂದಿಗೆ ತನ್ನ ಅಭಿಪ್ರಾಯವನ್ನು ತಿಳಿಸುವ ಉತ್ತಮ ಸಂವಹನ ಕಲೆ ಹಾಗೂ ಕಾರ್ಯಸಾಧಿಸುವ ಕಲೆ ಇರಬೇಕು.

ಸಹಕಾರಿ ನಾಯಕತ್ವದಲ್ಲಿ ಬಹುಮುಖ್ಯವಾದ ವಿಷಯ ಸಹಕಾರಿಯ ಬೆಳವಣಿಗೆಗೆ ಆದ್ಯತೆ ನೀಡುವುದು. ಇದಕ್ಕಾಗಿ ತನ್ನ ಜೊತೆಗಿರುವ ನಿರ್ದೇಶಕರುಗಳಲ್ಲಿ, ಸದಸ್ಯರಲ್ಲಿ ಸಹಕಾರಿ ನಾಯಕತ್ವವನ್ನು ಬೆಳೆಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನಿಸಬೇಕು. ಸಹಕಾರಿ ಸಂಸ್ಥೆ ನಮ್ಮದು, ನಾವು ಮಾಡುವ ಎಲ್ಲ ಕಾರ್ಯಗಳು ಅಭಿವೃದ್ಧಿಪರ ಎಂಬ ಭಾವನೆ ಎಲ್ಲರಲ್ಲಿಯೂ ಬರುವಂತೆ ಕಾರ್ಯನಿರ್ವಹಿಸಬೇಕು. ಕಾರ್ಯನಿರ್ವಹಣೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ವೃತ್ತಿಪರತೆ ರೂಢಿಸಿಕೊಳ್ಳಬೇಕು. ಎಲ್ಲರೊಂದಿಗೆ ಉತ್ತಮ ಬಾಂಧವ್ಯವಿರಬೇಕು. ಆಂತರಿಕ ಸಂಬಂಧಗಳ ನಿರ್ವಹಣೆಯಲ್ಲಿ ನೈಪುಣ್ಯತೆ ಸಾಧಿಸಬೇಕು. ಜೊತೆಗೆ ಮಾನವೀಯ ಮೌಲ್ಯಗಳನ್ನು ಮರೆಯಬಾರದು. ಉತ್ತಮ ನಾಯಕತ್ವವಿದ್ದಲ್ಲಿ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದರಲ್ಲಿ ಎರಡು ಅಭಿಪ್ರಾಯಗಳಿರುವುದಿಲ್ಲ. ನಾವುಗಳು ನಮ್ಮ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ಉತ್ತಮ ಪ್ರಗತಿಪರ ನಾಯಕತ್ವವನ್ನು ಬೆಳೆಸೋಣ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಸೂರ್ಯಕಾಂತ ರ್‍ಯಾಕಲೆ
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ .......... 2
ಸಂಪಾದಕೀಯ .......... 3
ಜ್ಞಾನ ಜ್ಯೋತಿ .......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳ .......... 05–14
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 15–21
**ಲೇಖನಗಳು :**
ಗಾಂಧೀಜಿಯವರ ಸಹಕಾರ ಚಳುವಳಿಯ ಕಲ್ಪನೆ – ದೇಶದಲ್ಲಿ ಸಾಕಾರಗೊಂಡಿದೆಯೇ .......... 22–24
ಕಾಗೆ ನೀರು ಕುಡಿದ ಹಳೆಯ ಕಥೆ : ಹೊಸ ಪಾಠ .......... 30
ಗ್ರಾಮೀಣ ಅಭಿವೃದ್ಧಿ ಹಾಗೂ ಸಹಕಾರ .......... 31–32

# ಸಂಪಾದಕೀಯ

## ಆತ್ಮ ವಿಶ್ವಾಸ – ಸುಸ್ಥಿರತೆ – ಸಹಕಾರ ಕ್ಷೇತ್ರದ ಸವಾಲುಗಳು

ಸಹಕಾರ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಅನೇಕ ಪ್ರಗತಿಪರ ಚಿಂತನೆಗಳು ನಡೆಯುತ್ತಿವೆ. ಸಹಕಾರ ಆಂದೋಲನದ ಪುನರ್ ವಿಮರ್ಶೆ, ಸಹಕಾರ ತತ್ವಗಳ ಪುನರ್ ವಿಮರ್ಶೆಗಳು ನಡೆಯುತ್ತಿವೆ. ಸಹಕಾರಿ ಕ್ಷೇತ್ರವನ್ನು ಇನ್ನಷ್ಟು ಗಟ್ಟಿಗೊಳಿಸಬೇಕು ಎಂಬ ಮುಖ್ಯ ಉದ್ದೇಶದೊಂದಿಗೆ ಸಹಕಾರಿಗಳ ಮಾನಸಿಕತೆಯಲ್ಲಿ ಪರಿವರ್ತನೆಗಳನ್ನು ಬಯಸಿ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯಲ್ಲಿ ಈ ರೀತಿಯ ಚಿಂತನೆಗಳು ಪ್ರಾರಂಭವಾಗಿವೆ. ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ನಮ್ಮ ದೇಶದ ಸಹಕಾರಿ ಕ್ಷೇತ್ರದ ಬೆಳವಣಿಗೆ ಒಂದೇ ರೀತಿಯಲ್ಲಿ ಹೊಂದಿರದೆ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇರಳ ಮುಂತಾದ ಕೆಲವೇ ರಾಜ್ಯಗಳಲ್ಲಿರುವಂತೆ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಅನ್ಯ ರಾಜ್ಯಗಳಲ್ಲಿ ಕಾಣುವುದಿಲ್ಲ. ಕಾರಣ ಸಹಕಾರಿಗಳಲ್ಲಿ ಆತ್ಮ ವಿಶ್ವಾಸದ ಕೊರತೆ ಹಾಗೂ ಸಹಕಾರ ಕ್ಷೇತ್ರದ ಸುಸ್ಥಿರ ಬೆಳವಣಿಗೆ ಇಲ್ಲದಿರುವುದು.

ದೇಶದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಾಧನೆ ಗಮನಾರ್ಹ. ನಮ್ಮ ದೇಶದ ಸಹಕಾರಿ ಚಳುವಳಿ ವಿಶ್ವದಲ್ಲಿಯೇ ದೊಡ್ಡದು. ಸಾಧನೆಗಳು ಹೆಮ್ಮೆ ಪಡುವಂತ್ತಿವೆ. ಸಹಕಾರ ಕ್ಷೇತ್ರದ ಬೆಳವಣಿಗೆಯಿಂದಲೇ ದೇಶದ ಆರ್ಥಿಕತೆಯಲ್ಲಿ ಸುಸ್ಥಿರತೆಯನ್ನು ಕಾಣಬಹುದು, ಸಹಕಾರಿಗಳಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ನಿರ್ವಹಿಸಬಹುದು ಎಂದು ದೇಶದಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಪ್ರಾರಂಭಿಸಿ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಸರಕಾರ ಪ್ರಯತ್ನಿಸುತ್ತಿರುವುದು ಶ್ಲಾಘನೀಯ. ರಾಷ್ಟ್ರೀಯ ಸಹಕಾರ ನೀತಿ, ಪ್ರಪ್ರಥಮಬಾರಿಗೆ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ಕಾಮನ್ ಸಾಫ್ಟ್‌ವೇರ್, ಗಣಕೀಕರಣ, ರಾಷ್ಟ್ರಮಟ್ಟದ 3 ಸಹಕಾರ ಸಂಘಗಳನ್ನು ಸ್ಥಾಪಿಸಿ ಸಹಕಾರ ಕ್ಷೇತ್ರದ ಮೂಲಕವೂ ಆಯಾತ–ನಿರ್ಯಾತ (Imports and exports) ವ್ಯವಸ್ಥೆಯನ್ನು ನಿರ್ವಹಿಸಲು ಅವಕಾಶ, ಉತ್ತಮ ಬೀಜಗಳ ಸರಬರಾಜು, ಸಾವಯವ ಕೃಷಿಗೆ ಅವಕಾಶ ಹೀಗೆ ಹಲವಾರು ಯೋಜನೆಗಳನ್ನು ಜಾರಿ ಮಾಡಿರುವುದು ರಾಷ್ಟ್ರಮಟ್ಟದಲ್ಲಿಯೇ ಬೃಹತ್ ಗೊದಾಮು ವ್ಯವಸ್ಥೆಗಳು ಸಹಕಾರಿಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತುಂಬಿದೆ. ಸಹಕಾರಿಗಳಿಗೆ ಆತ್ಮ ವಿಶ್ವಾಸವನ್ನು ಹೆಚ್ಚಿಸುವ ಪ್ರಯತ್ನವಾಗಿದೆ.

ಆತ್ಮವಿಶ್ವಾಸ ಹಾಗೂ ಸಹಕಾರಿಗಳ ಸುಸ್ಥಿರತೆ ಸಾಧಿಸುವ ಪ್ರಯತ್ನದಲ್ಲಿ ಹೊಸ ಅವಕಾಶಗಳ ಅವಿಷ್ಕಾರಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅವಶ್ಯಕತೆ ಇದೆ. ನಮ್ಮ ದೇಶ ಸಂಪದ್ಭರಿತ ದೇಶ. ಸಂಪನ್ಮೂಲಗಳ ಸಂಪೂರ್ಣ ಪ್ರಯೋಜನ ಪಡೆಯುವ ನಿಟ್ಟಿನಲ್ಲಿ ನಾವು ಕಾರ್ಯನಿರ್ವಹಿಸುವುದು ಅವಶ್ಯಕ. ಸಹಕಾರ ಕ್ಷೇತ್ರದಲ್ಲಿ ಹೊಸ ಹೊಸ ವಿಷಯಗಳ ಅವಿಷ್ಕಾರಗಳಾಬೇಕು. ಸಹಕಾರಿ ಕ್ಷೇತ್ರ ಆವರಿಸದ ಪ್ರವಾಸೋದ್ಯಮ, ಸಾರಿಗೆ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಸಾಕಷ್ಟು ಅವಕಾಶಗಳಿವೆ ದೇಶದ ಎಲ್ಲ ಭಾಗಗಳಲ್ಲಿ ಈ ರೀತಿಯ ಸಹಕಾರಿಗಳ ಸ್ಥಾಪನೆಗೆ ಕ್ರಮವಿಡಬೇಕು. ಸಹಕಾರಿಗಳಲ್ಲಿ ಈ ಕ್ಷೇತ್ರದ ಬಗ್ಗೆ ಆತ್ಮವಿಶ್ವಾಸ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಂದು ರಾಜ್ಯದಲ್ಲೂ ಸಹಕಾರ ಕ್ಷೇತ್ರದ ಬಗ್ಗೆ ತಿಳುವಳಿಕೆ ನೀಡಿ ಸಹಕಾರಿ ಸಂಸ್ಥೆಗಳಿಂದ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ಆತ್ಮ ವಿಶ್ವಾಸವನ್ನು ಸದಸ್ಯರಲ್ಲಿ ಬೆಳೆಸುವುದು ಎಲ್ಲ ಸಹಕಾರಿಗಳ ಕರ್ತವ್ಯವಾಗಿದೆ. ಇದರಿಂದ ಸುಸ್ಥಿರ ಅಭಿವೃದ್ಧಿಯೂ ಸಾಧ್ಯ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಆನಂದ ಕರ್ಮ"

ಮನುಷ್ಯನಿಗೆ ಮುಖ್ಯವಾಗಿ ಮೂರು ಅಂಗಗಳು, ಅವಯವಗಳು. ಮೈ, ಮನಸ್ಸು, ಮಾತು, ಅವನ್ನೇ ತ್ರಿಕರಣವೆನ್ನುತ್ತಾರೆ. ಹೊರಗೆ ದೇಹ, ಒಳಗೆ ಮನಸ್ಸು ಮಧ್ಯದಲ್ಲಿ ಮಾತು, ಕಾಯಾ, ವಾಚಾ, ಮನಸಾ ಹೀಗೆ ಮೂರು ಅವಯವಗಳಿಂದ ಮನುಷ್ಯನ ಜೀವನವು ರೂಪುಗೊಳ್ಳುತ್ತದೆ. ಈ ತ್ರಿಕರಣಗಳು ಸುಂದರವಾಗಿದ್ದರೆ ನಮ್ಮ ಜೀವನನೇ ಸುಂದರ. ಈ ಮೂರರಲ್ಲಿ ಒಂದೇ ಅವಯವವೂ ಮಲೀನವಾಗಿದ್ದರೆ. ದುರ್ಬಲವಾಗಿದ್ದರೆ ಜೀವನದ ಸೌಂದರ್ಯ ಕೆಡುತ್ತದೆ.

ಈ ಜಗತ್ತು, ಜೀವನ ಕ್ರಿಯೆಯ ಮೇಲೆ ನಿಂತಿದೆ. ಕ್ರಿಯೆ ಇಲ್ಲದ ಒಂದೇ ಒಂದು ವಸ್ತು ಈ ಜಗತ್ತಿನಲ್ಲಿ ಇಲ್ಲ. ಒಂದು ಬೀಜವು ಹೆಮ್ಮರವಾಗಿ ಬೆಳೆಯಬೇಕಾದರೆ ಅದರಲ್ಲಿ ನಿರಂತರ ಕ್ರಿಯೆ ನಡೆಯಬೇಕಾಗುತ್ತದೆ. ಆದರಿಂದ ಈ ಬೀಜವು ಗಾಳಿ, ನೀರು ಬೆಳಗನುಂಡು ಬೆಳೆದು ಶಾಖೋಪಶಾಖೆಗಳನ್ನು ಬಿಟ್ಟು ಹೂವು, ಹಣ್ಣು ಕಾಯಿಗಳನ್ನು ಕೊಡುತ್ತಾ ಸಾವಿರ ವರುಷ ಬದುಕುತ್ತದೆ.

ನಮ್ಮ ದೇಹವು ಕ್ರಿಯಾಶೀಲವಾಗಿರಬೇಕು. ಮಾತು ಮೃದುವಾಗಿರಬೇಕು. ಮನಸ್ಸು ಹಸನಾಗಿರಬೇಕು. ಆದರಿಂದ ನಮ್ಮ ಜೀವನವು ಸರ್ವಾಂಗ ಸುಂದರವಾಗುತ್ತದೆ. ಮಹಾತ್ಮರು ತಮ್ಮ ಬದುಕಿನಲ್ಲಿ ಈ ಮೂರು ಅವಯವಗಳನ್ನು ಸಮನಾಗಿ ಬಳಸಿ, ಬೆಳೆಸಿ ಲೋಕ ಪೂಜ್ಯರೆನಿಸಿದರು. ಅದರಲ್ಲಿಯೂ ಕ್ರಿಯೆಗೆ ಒಂದಿಷ್ಟು ಹೆಚ್ಚು ಮಹತ್ವ ನೀಡಿರುವುದನ್ನು ಕಾಣುತ್ತೇವೆ. ಒಂದು ಮರದಲ್ಲಿ ಎಲೆ, ಹೂವು, ಹಣ್ಣು, ಕಾಯಿ, ಶಾಖೆಗಳು ಎಷ್ಟು ಮಹತ್ವದ್ದೋ ಅದಕ್ಕಿಂತಲೂ ಬೇರಿಗೆ ಒಂದು ಗುಂಜಿಯಷ್ಟಾದರೂ ಹೆಚ್ಚಿಗೆ ಮಹತ್ವವಿದೆ. ಬೇರು ನೆಲದಾಳಕ್ಕೆ ಇಳಿದು ನೀರು ಹೀರದಿದ್ದರೆ ಮರವು ಬದುಕಿ ಉಳಿಯುವುದಿಲ್ಲ. ಪ್ರಪಂಚದಲ್ಲಿಯೂ ಅಷ್ಟೇ. ಕೆಳಗಿನವರು ದುಡಿದರೆ ಮಾತ್ರ ಮೇಲಿನವರು ಬದುಕುತ್ತಾರೆ. ಆದರೆ ಪದವಿ. ಪ್ರಶಸ್ತಿಗಳೆಲ್ಲವೂ ಮೇಲಿನವರಿಗೆ ವಿನಾ ಬೇರಿನಂತೆ ಕೆಳಗಿರುವವರಿಗಲ್ಲ. ಆದರೂ ಮರ ನಿಂತಿರುವುದು ಬೇರಿನ ಮೇಲೆ ಎನ್ನುವುದನ್ನು ನಾವು ಮರೆಯಬಾರದು. ಆದುದರಿಂದಲೇ ಬುದ್ಧಿ, ಭಾವಗಳಿಗಿಂತ ಕ್ರಿಯೆಗೆ ಹೆಚ್ಚು ಮಹತ್ವವನ್ನು ನಮ್ಮ ಋಷಿ – ಮುನಿಗಳು ಕೊಟ್ಟಿರುವರು.

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ॥

ಗೀತಾ 3 (8)

ನಿತ್ಯವೂ ನಾವು ಕರ್ಮ ಮಾಡುತ್ತಿರಬೇಕು. ಏಕೆಂದರೆ ಅಕರ್ಮಕ್ಕಿಂತ ಕರ್ಮವು ಉತ್ತಮವಾಗಿದೆ. ಅಲ್ಲದೆ ಕರ್ಮ ಮಾಡದಿದ್ದರೆ ಜೀವನವೂ ನಡೆಯುವುದಿಲ್ಲ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ

ಈಶಾವಾಸ್ಯ–2

ಕರ್ಮಗಳನ್ನು ಮಾಡುತ್ತ ನೂರುವರುಷ ಬದುಕಬೇಕು.

ನಾವು ನಿರಂತರ ಸತ್ಕರ್ಮಗಳನ್ನು ಮಾಡುತ್ತ ನೂರು ವಸಂತಗಳವರೆಗೆ ಬಾಳಬೇಕು. ಸತ್ಕರ್ಮವೇ ಸಂತಸದ ಮೂಲವಾಗಿದೆ. "ನಿಯತಂ ಕುರು ಕರ್ಮ ತ್ವಂ" ಎಂದರೆ ನಾವು ಕರ್ಮವನ್ನು ನಿತ್ಯವು ಮಾಡುತ್ತಿರಬೇಕು. ವಾರಕ್ಕೊಮ್ಮೆ ಅಥವಾ ಎರಡು ದಿನಕ್ಕೆ ಒಮ್ಮೆಯಲ್ಲ. ನಮ್ಮ ಹೃದಯವು ಒಂದು ಕ್ಷಣವು ಬಿಡದೆ ಜೀವನದ ಕೊನೆಯವರೆಗೂ ದುಡಿಯುತ್ತದೆ. ಹಾಗೆಯೇ ನಾವಾದರೂ ನಿರಂತರ ದುಡಿಯಲೇಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಸೆಪ್ಟೆಂಬರ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 976 | 1079 | 657 | 367 | 3079 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 200 | 65 | 57 | 52 | 374 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 0 | 34 | 01 | 03 | 38 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 1176 | 1110 | 713 | 416 | 3415 |
| **ಸೆಪ್ಟೆಂಬರ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 374 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 38** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7680 | 1503 | 2358 | 840 | 12381 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1268 | 280 | 637 | 219 | 2404 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6412 | 1223 | 1721 | 621 | 9977 |
| **ಸೆಪ್ಟೆಂಬರ್ 2026ರ ತಿಂಗಳಿನಲ್ಲಿ ಒಟ್ಟು 39 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸಂಯುಕ್ತ ಸಹಕಾರಿಯ ಬೆಳ್ಳಿ ಮಹೋತ್ಸವ ಆಚರಣೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 08.09.2026 ಮಂಗಳವಾರದಂದು ಅತ್ಯಂತ ವಿಜೃಂಭಣೆಯಿಂದ ರಾಯಲ್ ತ್ರಿಪುರವಾಸಿನಿ, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ, ಬೆಂಗಳೂರಿನಲ್ಲಿ ನಡೆಯಿತು. ಸಾಮಾನ್ಯ ಸಭೆಯಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ 2704 ಪ್ರತಿನಿಧಿಗಳು ಹಾಗೂ 2500 ಸಹಕಾರಿಗಳು ಭಾಗವಹಿಸಿದ್ದರು.

## ಧ್ವಜಾರೋಹಣ ಹಾಗೂ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ :



ಬೆಳಿಗ್ಗೆ 9.45ಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಮತ್ತು ಸಹಕಾರಿಗಳ ಪ್ರತಿನಿಧಿಗಳೆಲ್ಲ ಸೇರಿ ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಿದರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಬೋಧಿಸಿದರು.

## ತಂತ್ರಜ್ಞಾನ ಮೇಳ :



ಪ್ರತಿ ಸಲದಂತೆ ಈ ಬಾರಿಯೂ ಸಹ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ತಂತ್ರಜ್ಞಾನದ ಮಾಹಿತಿಯನ್ನು ಒದಗಿಸುವ ದೃಷ್ಟಿಯಿಂದ ತಂತ್ರಜ್ಞಾನ ಮೇಳವನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದರು.

ಈ ಬಾರಿಯ ತಂತ್ರಜ್ಞಾನ ಮೇಳದಲ್ಲಿ 41 ಕಂಪನಿಗಳು ತಮ್ಮ ಕಂಪನಿಯ ವಸ್ತುಗಳ ಮಾರಾಟ ವ್ಯವಸ್ಥೆಯನ್ನು ಹಾಗೂ ನಂದಿನಿ ಉತ್ಪಾದನಾ ವಸ್ತುಗಳ ಮತ್ತು ಸಂಯುಕ್ತ ಸಹಕಾರಿ ಪ್ರಕಟಿಸಿರುವ ಪುಸ್ತಕ ಮಾರಾಟವನ್ನು ಏರ್ಪಡಿಸಲಾಗಿತ್ತು.



## ಸುಗಮ ಸಂಗೀತ :

25ನೇ ವಾರ್ಷಿಕ ಸಾಮಾನ್ಯ ಸಭೆ ಪೂರ್ವದಲ್ಲಿ ಮಹಾಲಿಂಗ ತಂಡದವರಿಂದ ಪ್ರಾರ್ಥನೆಗೀತೆ, ಸಹಕಾರಗೀತೆ, ರೈತಗೀತೆ ಹಾಗೂ ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು.

## ಶ್ರದ್ಧಾಂಜಲಿ :

**ಅಗಲಿದ ಗಣ್ಯರು ಹಾಗೂ ಸಹಕಾರಿಗಳಿಗಾಗಿ ಮೌನಾಚರಣೆ :** ಕಳೆದ ಸಾಲಿನಲ್ಲಿ ನಿಧನರಾದ ಅನೇಕ ಗಣ್ಯಾತಿ ಗಣ್ಯರು, ರಾಜಕಾರಣಿಗಳು, ಸಾಹಿತಿಗಳು, ಚಿತ್ರರಂಗದ ಪ್ರಮುಖರು ಹಾಗೂ ಸಹಕಾರಿಗಳ ಹೆಸರುಗಳನ್ನು ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಓದಿದರು. ನಂತರ ಅಗಲಿದ ಎಲ್ಲರಿಗೂ ಶಾಂತಿಕೋರಿ ಮೌನ ಆಚರಿಸಲಾಯಿತು.




ಡೊಳ್ಳು ಕುಣಿತದೊಂದಿಗೆ ಗಣ್ಯರ ಸ್ವಾಗತ



## ಸ್ವಾಗತ ಹಾಗೂ ನಿರ್ದೇಶಕರ ಪರಿಚಯ :

ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರರವರು ಸಭೆಗೆ ಆಗಮಿಸಿದ್ದ ಸೌಹಾರ್ದ ಸಹಕಾರಿಗಳಿಗೆ ಸ್ವಾಗತ ಮಾಡಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳನ್ನು ಸಾಮಾನ್ಯ ಸಭೆಗೆ ಪರಿಚಯಿಸಿದರು.



## ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ :

ಸಭೆಯ ವಿಷಯಗಳು ಪ್ರಾರಂಭವಾಗುವುದಕ್ಕೆ ಮೊದಲು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಂಯುಕ್ತ ಸಹಕಾರಿಯ ಪ್ರಸಕ್ತ ಸಾಲಿನ ಚಟುವಟಿಕೆಗಳ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 271 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ. ಈ ವರ್ಷ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಗೆ ಪ್ರಗತಿ, ಸವಾಲುಗಳು, ಸಾಧನೆಗಳ ಹಾಗೂ ಅಭಿವೃದ್ಧಿಯ ಪರ್ವ ಇದಾಗಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ತನ್ನ ಶಾಸನಾತ್ಮಕ ಕಾರ್ಯಚಟುವಟಿಕೆಗಳ ಜೊತೆಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಜರುಗಿಸಿದೆ.

ಈ ಬಾರಿಯ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ನಮ್ಮೆಲ್ಲರಿಗೂ ಅತ್ಯಂತ ಸಂತೋಷ, ಹೆಮ್ಮೆ ಮತ್ತು ಮಹತ್ವದ್ದಾಗಿದೆ. ಏಕೆಂದರೆ, ಸಂಯುಕ್ತ ಸಹಕಾರಿಯು ತನ್ನ 25 ವರ್ಷಗಳ ಸುದೀರ್ಘ ಪ್ರಯಾಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ರಜತ ಮಹೋತ್ಸವದ ಸಂಭ್ರಮದೊಂದಿಗೆ ಇಂದು 25ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುತ್ತಿದ್ದೇವೆ. ಕಳೆದ ಬಾರಿ ಸೌಹಾರ್ದ ಸಹಕಾರಿ ಕಾಯ್ದೆ ರಜತ ಮಹೋತ್ಸವವನ್ನು ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ಆಚರಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. 25 ವರ್ಷಗಳು ಎಂದರೆ ಕೇವಲ ಅವಧಿಯಲ್ಲ. ಅದು ನಂಬಿಕೆ, ಪರಿಶ್ರಮ, ಸೇವೆ, ಸವಾಲುಗಳು, ಸಾಧನೆಗಳು ಮತ್ತು ನಿರಂತರ ಬದ್ಧತೆಯ ಸಂಕೇತವಾಗಿದೆ. ಈ 25 ವರ್ಷಗಳ ಪಯಣದಲ್ಲಿ ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಕಾರಣರಾದ ಪ್ರತಿಯೊಬ್ಬರನ್ನು ಈ ಸಂದರ್ಭದಲ್ಲಿ ಗೌರವದಿಂದ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಮುಂದುವರೆದು ಮಾತನಾಡುತ್ತ 25 ವಸಂತಗಳ ಪಯಣ – ಸಾಧನೆಯ ಹೆಮ್ಮೆಯ ಹಾದಿ ದಿನಾಂಕ 04.01.2002ರಲ್ಲಿ ಶಾಸನಬದ್ಧವಾಗಿ ರಚನೆಯಾದ ಸಂಯುಕ್ತ ಸಹಕಾರಿಯು ಸ್ಥಾಪನೆಯಾದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಬಲವರ್ಧನೆ, ಅವುಗಳಿಗೆ ಅಗತ್ಯವಾದ ಮಾರ್ಗದರ್ಶನ ಮತ್ತು ಸೇವೆ, ಉತ್ತಮ ಆಡಳಿತ ವ್ಯವಸ್ಥೆ, ತರಬೇತಿ ಹಾಗೂ ಬಲವರ್ಧನೆ ಮತ್ತು ಸೌಹಾರ್ದ ಸಹಕಾರಿ ಚಳುವಳಿಯ ಸಮಗ್ರ ಅಭಿವೃದ್ಧಿಗೆ ಪೂರಕವಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು ಪ್ರಮುಖ ಉದ್ದೇಶವಾಗಿತ್ತು. ಆರಂಭಿಕ ಹಂತದಲ್ಲಿ ಸಂಪನ್ಮೂಲಗಳ ಕೊರತೆ, ತಾಂತ್ರಿಕ ಸೌಲಭ್ಯಗಳ ಸೀಮಿತತೆ ಹಾಗೂ ಹೊಸ ವ್ಯವಸ್ಥೆಯ ಕುರಿತು ಅರಿವು ಮೂಡಿಸುವಂತಹ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ಆದಾಗ್ಯೂ, ಸೌಹಾರ್ದ ಸಹಕಾರಿಗಳು, ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಸಿಬ್ಬಂದಿಯವರ ನಿರಂತರ ಸಹಕಾರ ಮತ್ತು ವಿಶ್ವಾಸದೊಂದಿಗೆ ಹಂತ ಹಂತವಾಗಿ ಮುನ್ನಡೆದು ಇಂದು 25ನೇ ವರ್ಷದ ಮೈಲಿಗಲ್ಲನ್ನು ದಾಟಿದ್ದೇವೆ.

ಈ ಮಹತ್ವದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸ್ಥಾಪನೆಗೆ ಕಾರಣರಾದ ಹಿರಿಯ ಸಹಕಾರಿಗಳು ಹಾಗೂ ಹಿಂದಿನ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಪದಾಧಿಕಾರಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಯವರ ಅಮೂಲ್ಯ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅವರ ದೂರದೃಷ್ಟಿ, ಪರಿಶ್ರಮ ಮತ್ತು ತ್ಯಾಗದ ಫಲವಾಗಿ ಸಂಯುಕ್ತ ಸಹಕಾರಿಯು ಇಂದು ಬಲಿಷ್ಠ ಸಂಸ್ಥೆಯಾಗಿ ಬೆಳೆದು ನಿಂತಿದೆ. ಕಳೆದ 25 ವರ್ಷಗಳ ಈ ಪಯಣವು ಕೇವಲ ಒಂದು ಸಂಸ್ಥೆಯ ಬೆಳವಣಿಗೆಯಲ್ಲದೇ, ಸೌಹಾರ್ದ ಸಹಕಾರಿಗಳ ಬಲವರ್ಧನೆ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಯೊಂದಿಗೆ ಬೆಸೆದುಕೊಂಡಿರುವ ಸಾರ್ಥಕ ಪಯಣವಾಗಿದೆ.

ಬದಲಾವಣೆಯೊಂದಿಗೆ ಹೆಜ್ಜೆ ಹಾಕುತ್ತಿರುವ ಸೌಹಾರ್ದ ಸಹಕಾರಿಗಳು ತಂತ್ರಜ್ಞಾನ, ಡಿಜಿಟಲೀಕರಣ ಮತ್ತು ಕೃತಕ ಬುದ್ಧಿಮತ್ತೆಯ ವೇಗದ ಬೆಳವಣಿಗೆಯೊಂದಿಗೆ ಸೌಹಾರ್ದ ಸಹಕಾರಿ ಕ್ಷೇತ್ರವೂ ಆಧುನಿಕತೆಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಸಂಸ್ಥೆಯ ದಾಖಲೆಗಳ ಡಿಜಿಟಲೀಕರಣ, ಡಿಜಿಟಲ್ ಸೇವೆಗಳ ವಿಸ್ತರಣೆ ಹಾಗೂ ತಂತ್ರಜ್ಞಾನ ಆಧಾರಿತ (ಸಾಫ್ಟ್‌ವೇರ್) ಆಡಳಿತಕ್ಕೆ ಆದ್ಯತೆ ನೀಡುತ್ತಿದೆ. ಜೊತೆಗೆ,

ಸೌಹಾರ್ದ ಸಹಕಾರಿಗಳ ಮೂಲಕ ಸಾಮಾನ್ಯ ಸೇವಾ ಕೇಂದ್ರಗಳಂತಹ (ಸಿಎಸ್‌ಸಿ) ಸೌಲಭ್ಯಗಳನ್ನು ಜನರಿಗೆ ತಲುಪಿಸುತ್ತಿದ್ದು, ಸೌಹಾರ್ದ ಸಹಕಾರಿಗಳು ಕೇವಲ ಆರ್ಥಿಕ ವ್ಯವಹಾರಗಳ ಸಂಸ್ಥೆಗಳಾಗಿರದೇ, ಸದಸ್ಯರು ಹಾಗೂ ಸಾರ್ವಜನಿಕರಿಗೆ ವಿವಿಧ ಸೇವೆಗಳನ್ನು ಒದಗಿಸುವ ಬಹುಮುಖ ಸೇವಾ ಕೇಂದ್ರಗಳಾಗಿ ರೂಪುಗೊಳ್ಳುವತ್ತ ಹೆಜ್ಜೆ ಹಾಕುತ್ತಿವೆ.

ಹೆಚ್ಚಿನ ಠೇವಣಿ ಹೊಂದಿರುವ ದೊಡ್ಡ ದೊಡ್ಡ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ನಡೆಸಿ ಅಂತಹ ಸಂಸ್ಥೆಗಳಲ್ಲಿ ಕಂಡುಬರುವ ನ್ಯೂನ್ಯತೆ, ಲೋಪಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ನಿರಂತರ ಶ್ರಮಿಸುತ್ತಿದೆ. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ನಿರಂತರ ನಿಗಾವಹಿಸಲು "ಟಾಸ್ಕ್‌ಫೋರ್ಸ್" ವಿಭಾಗವು ನಿರಂತರ ಶ್ರಮಿಸುತ್ತಿದೆ. ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟ ಹೆಚ್ಚಿಸುವಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಹೆಚ್ಚಿನ ಮಹತ್ವದ್ದಾಗಿದೆ. ಜವಾಬ್ದಾರಿಯುತ ಆಡಳಿತ ಮಂಡಳಿ ಹಾಗೂ ಕ್ರಿಯಾಶೀಲ ಸದಸ್ಯತ್ವದೊಂದಿಗೆ ಈ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಲು ತಮ್ಮಲ್ಲೆರಲ್ಲಿ ವಿನಂತಿ ಮಾಡುತ್ತೇನೆ.

**ಸಂಪರ್ಕ ಸಭೆಗಳಲ್ಲಿ ಸಹಕಾರಿಗಳ ಕ್ರಿಯಾಶೀಲ ಭಾಗವಹಿಸುವಿಕೆ :** ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ಪ್ರವಾಸಗಳನ್ನು ಮಾಡುವ ಮೂಲಕ ಹಾಗೂ ಸಂಪರ್ಕ ಸಭೆಗಳನ್ನು ಆಯೋಜಿಸಿ ಪಾಲ್ಗೊಳ್ಳುವ ಮೂಲಕ ಈ ಕ್ಷೇತ್ರದ ಅಗತ್ಯತೆ, ಸಹಕಾರಿಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳುವ ಕೆಲಸವನ್ನು ಮಾಡಲಾಗಿದೆ. 2025–26ನೇ ಸಾಲಿನಲ್ಲಿ ರಾಜ್ಯಾದ್ಯಂತ 26 ಸಂಪರ್ಕ ಸಭೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗಳಲ್ಲಿ ರಾಜ್ಯದ 2210 ಸೌಹಾರ್ದ ಸಹಕಾರಿಗಳಿಂದ 4067 ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯಲ್ಲಿ ಸಹಕಾರಿಗಳು ನೀಡಿರುವ ಸಲಹೆ/ಅಭಿಪ್ರಾಯಗಳನ್ನಾಧರಿಸಿ ಸೂಕ್ತ ಕಾರ್ಯಯೋಜನೆಯೊಂದಿಗೆ ಈ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲು ನಾವು ಸಿದ್ಧರಾಗಿದ್ದೇವೆ. ಈ ಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೌಹಾರ್ದ ಸಹಕಾರಿಗಳು ಕ್ರಿಯಾಶೀಲವಾಗಿ ಭಾಗವಹಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು, ಸಲಹೆ ನೀಡಿರುವುದನ್ನು ಸಂತೋಷದಿಂದ ಸ್ವೀಕರಿಸಿದ್ದೇನೆ ಹಾಗೂ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಎತ್ತರಕ್ಕೇರಿಸಬೇಕು. ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳು ಇರದಂತೆ ಕ್ರಮವಹಿಸಬೇಕು. ಎಲ್ಲ ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಕಾರ್ಯನಿರ್ವಹಿಸಿಬೇಕು ಎಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಅಪೇಕ್ಷೆ. ಎಂದು ಹೇಳಿದರು.



## ವಿಷಯಗಳ ಮಂಡನೆ :

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ಅನುಕ್ರಮವಾಗಿ ವಿಷಯಗಳನ್ನು ಮಂಡಿಸಿದರು. ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಸುದೀರ್ಘ ಚರ್ಚೆಗಳ ನಂತರ ಸಭೆಯು ಸರ್ವಾನುಮತದಿಂದ ಎಲ್ಲ ವಿಷಯಗಳನ್ನು ಅನುಮೋದಿಸಿತು.

## ವಂದನಾರ್ಪಣೆ :

ಸಂಯುಕ್ತ ಸಹಕಾರಿಯ 25ನೇ ವಾರ್ಷಿಕ ಸಾಮಾನ್ಯ ಸಭೆ ಕಾರ್ಯಕ್ರಮದ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯಯವರು ನೆರವೇರಿಸಿದ್ದರು.





ಭಾಗವಹಿಸಿದ ಸಹಕಾರಿಗಳು









ಸಭೆಯಲ್ಲಿ ಮಾತನಾಡಿದ ಪ್ರತಿನಿಧಿಗಳು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಂಯುಕ್ತ ಸಹಕಾರಿಯ ಬೆಳ್ಳಿ ಮಹೋತ್ಸವ ಕಾರ್ಯಕ್ರಮ




ಸಂಯುಕ್ತ ಸಹಕಾರಿಯ ಬೆಳ್ಳಿ ಮಹೋತ್ಸವದ ಉದ್ಘಾಟನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಂಯುಕ್ತ ಸಹಕಾರಿಯ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ದಿನಾಂಕ 08.09.2026 ರಂದು ಮಧ್ಯಾಹ್ನ 12.30ಕ್ಕೆ ಮಂಗಳವಾರದಂದು ಅತ್ಯಂತ ವಿಜೃಂಭಣೆಯಿಂದ ರಾಯಲ್ ತ್ರಿಪುರವಾಸಿನಿ, ಗೇಟ್ ಸಂಖ್ಯೆ–02, ಅರಮನೆ ಮೈದಾನ, ರಮಣ ಮಹರ್ಷಿರಸ್ತೆ, ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಮಹಾಲಿಂಗ ತಂಡದವರಿಂದ ನೆರವೇರಿಸಲಾಯಿತು.

**ಉದ್ಘಾಟನೆ :** ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಎಸ್. ಬಿ ಶೆಟ್ಟಣ್ಣವರ ಐ.ಎ.ಎಸ್, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಮುಖ್ಯ ಅತಿಥಿಗಳಾಗಿ ಡಾ. ವೆಂಕಟೇಶ್ ಎಮ್.ವಿ. ಐ.ಎ.ಎಸ್ ಮಾನ್ಯ ಸಹಕಾರಿಗಳ ನಿಬಂಧಕರು, ಸಹಕಾರ ಇಲಾಖೆ ಕರ್ನಾಟಕ ಸರ್ಕಾರ, ಸನ್ಮಾನ್ಯ ಡಾ. ಸುರೇಶಗೌಡ ಕೆ.ಸಿ.ಎಸ್ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, (ಕಾನೂನು ಕೋಶ) ನಿಬಂಧಕರ ಕಛೇರಿ, ಬೆಂಗಳೂರು ಹಾಗೂ ಸನ್ಮಾನ್ಯ ಶ್ರೀ ಶಕೀಬ್ ಅಹ್ಮದ್ ಮಾನ್ಯ ರಾಜ್ಯ ಮುಖ್ಯಸ್ಥರು, ಸಿಎಸ್‌ಸಿ ಕರ್ನಾಟಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌರವರು ವಹಿಸಿದರು. ಹಾಗೂ ಸಂಯುಕ್ತ ಸಹಕಾರಿ ಆಡಳಿತ ಮಂಡಳಿಯರು ಉಪಸ್ಥಿತರಿದ್ದರು.



## ಸ್ವಾಗತ ಭಾಷಣ :

ಕಾರ್ಯಕ್ರಮದ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿರವರು ಸ್ವಾಗತ ಕೋರಿದರು.

## ಪ್ರಾಸ್ತಾವಿಕ ಭಾಷಣ :

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಪ್ರಾಸ್ತಾವಿಕವಾಗಿ ಮಾತನಾಡಿದರು.



## ಮಾತುಕತೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಲಹೆ :

### ಸನ್ಮಾನ್ಯ ಶ್ರೀ ಎಸ್. ಬಿ. ಶೆಟ್ಟಣ್ಣವರ ಐ.ಎ.ಎಸ್. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಇವರು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ತಂದಿರುವುದಕ್ಕೆ ಹಲವಾರು ವಿರೋಧ ವ್ಯಕ್ತಪಡಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಈ ಸಮಸ್ಯೆಗಳನ್ನು ಕುರಿತು ಮಾತುಕತೆಯ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.





## ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಅಳವಡಿಸಿಕೊಳ್ಳಿ :
## ಸನ್ಮಾನ್ಯ ಡಾ॥ ವೆಂಕಟೇಶ್ ಎಮ್.ವಿ. ಐ.ಎ.ಎಸ್. ಮಾನ್ಯ ಸಹಕಾರಿಗಳ ನಿಬಂಧಕರು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ

ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯದಲ್ಲಿ 6750 ಸೌಹಾರ್ದ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ, ದೇಶದಲ್ಲಿ ಸಾಧನೆ ಮಾಡಿರುವ ಸೌಹಾರ್ದ ಸಹಕಾರಿಗಳಲ್ಲಿ ಕರ್ನಾಟಕ ರಾಜ್ಯವೂ ಒಂದು. ಜನರ ಆಶೋತ್ತರಗಳಿಗೆ ಸ್ಪಂಧಿಸಿ ಸಾಲ ನೀಡುವುದಲ್ಲದೆ, ಜನರಿಗೆ ಹಲವು ಸೇವೆಗಳನ್ನು ನೀಡುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ಸೌಹಾರ್ದ ಸಹಕಾರಿ ಸಂಸ್ಥೆಗಳು ಪಾರದರ್ಶಕವಾಗಿರಬೇಕು :
## ಡಾ. ಸುರೇಶಗೌಡ ಕೆ.ಸಿ.ಎಸ್, ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, (ಕಾನೂನು ಕೋಶ) ನಿಬಂಧಕರ ಕಛೇರಿ, ಬೆಂಗಳೂರು.



ಸಹಕಾರಿಗಳು ಸಂಸ್ಥೆಯ ಹಿತದೃಷ್ಟಿಯಿಂದ ಸ್ವಾಯತ್ತತೆ, ಸ್ವಯಂ ನಿಯಂತ್ರಣ ಹಾಗೂ ಸ್ವಯಂ ಆಡಳಿತ ತತ್ವಗಳೊಂದಿಗೆ ಪಾರದರ್ಶಕತೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು.




ಸೌಹಾರ್ದ ಬೆಳ್ಳಿ ಬೆಳಕು ಪುಸ್ತಕ ಬಿಡುಗಡೆ




ಸಂಯುಕ್ತ ಸಹಕಾರಿಯ ಪರಿಷ್ಕೃತ ಪ್ರಕಟಣೆಗಳು ಹಾಗೂ ಸಹಕಾರ ಜ್ಯೋತಿ ಪುಸ್ತಕ ಬಿಡುಗಡೆ

## 2025ನೇ ಸಾಲಿನ ಸಹಕಾರ ರತ್ನ ಪುರಸ್ಕೃತರಿಗೆ - ಶ್ರೇಷ್ಠ ಸಹಕಾರಿಗಳಿಗೆ - ಉತ್ತಮ ಸೌಹಾರ್ದ ಸಹಕಾರಿಗಳಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ಪ್ರತಿ ವರ್ಷ ಸಹಕಾರಿ ಸಪ್ತಾಹ ಆಚರಣೆಯ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಸಹಕಾರ ರತ್ನ ಪುರಸ್ಕೃತರಲ್ಲಿ ಸೌಹಾರ್ದ ಸಹಕಾರಿಯ ಕ್ಷೇತ್ರಕ್ಕೆ ಸಂಬಂಧಿಸಿದ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರನ್ನು ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸಹಕಾರಿಗಳ ಪರವಾಗಿ ಸನ್ಮಾನಿಸುವ ಕಾರ್ಯಕ್ರಮವನ್ನು ಈ ಸಲವು ಕೂಡ ಹಮ್ಮಿಕೊಳ್ಳಲಾಗಿತ್ತು. ಈ ಸಾಲಿನಲ್ಲಿ ಈ ಕೆಳಕಂಡವರನ್ನು ಸನ್ಮಾನಿಸಲಾಯಿತು.

1. ಶ್ರೀ ಕಲ್ಲಪ್ಪಣ್ಣಾ ಪಾರಿಸಾ ಮಗೆಣ್ಣವರ, ಮಾನ್ಯ ಸಂಸ್ಥಾಪಕ ಅಧ್ಯಕ್ಷರು, ಶ್ರೀ ಕೆ.ಪಿ. ಮಗೆಣ್ಣವರ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮಾಂಜರಿ, ಚಿಕ್ಕೋಡಿ, ಬೆಳಗಾವಿ.
2. ಶ್ರೀ ನಿಂಗಪ್ಪ ನಂದೆಪ್ಪ ಕಡಪಟ್ಟಿ, ಮಾನ್ಯ ನಿರ್ದೇಶಕರು, ಶ್ರೀ ಸಿದ್ದು ನ್ಯಾಮಗೌಡ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಜಮಖಂಡಿ, ಬಾಗಲಕೋಟ.

3. ಶ್ರೀ ಶಂಕರಗೌಡ ಸಿದ್ರಾಮಗೌಡ ಪಾಟೀಲ, ಮಾನ್ಯ ಅಧ್ಯಕ್ಷರು, ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿ., ಬಸವನ ಬಾಗೇವಾಡಿ, ವಿಜಯಪುರ.
4. ಶ್ರೀ ಗೌಳಿ ಕುಮಾರ ಸ್ವಾಮಿ, ಮಾನ್ಯ ನಿರ್ದೇಶಕರು, ಶ್ರೀ ಲಕ್ಷ್ಮೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹೊಸಪೇಟೆ, ವಿಜಯನಗರ.
5. ಶ್ರೀ ವೆಂಕಟೇಶ ಹೆಗಡೆ, ಮಾನ್ಯ ಅಧ್ಯಕ್ಷರು, ಆದಿಜಾಂಬವ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬಳ್ಳಾರಿ.
6. ಶ್ರೀ ಮಹಲಿಂಗಪ್ಪ ತಂದೆ ಮಲ್ಲಪ್ಪ ಮಾನ್ಯ ನಿರ್ದೇಶಕರು, ಶ್ರೀ ಕಾಳಿದಾಸ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕುಷ್ಟಗಿ, ಕೊಪ್ಪಳ.
7. ಶ್ರೀ ಭಾಸ್ಕರ್ ಕೋಟ್ಯಾನ್, ಮಾನ್ಯ ನಿರ್ದೇಶಕರು, ನವೋದಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ, ಮಂಗಳೂರು.




ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು

## ಸನ್ಮಾನಿತರಾದ ಉತ್ತಮ ಸೌಹಾರ್ದ ಸಹಕಾರಿಗಳು

1. ಶ್ರೀ ಕನ್ನಕ ಸೌಹಾರ್ದ ಸಹಕಾರಿ ನಿ., ಹಿರಿಯೂರು, ಚಿತ್ರದುರ್ಗ
2. ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಡಿಕೇರಿ, ಕೊಡಗು.
3. ಶ್ರೀ ಧನಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಆಳಂದ, ಕಲಬುರಗಿ
4. ಅನಮೋಲ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಬೆಳಗಾವಿ
5. ಶ್ರೀಜಗದಂಬಾ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಗದಗ

## ಸನ್ಮಾನಿತರಾದ ಶ್ರೇಷ್ಠ ಸಹಕಾರಿಗಳು

1. ಶ್ರೀ ಜಿ.ಎ ಬಾಲಾಜಿ, ಮಾನ್ಯ ಅಧ್ಯಕ್ಷರು, ಶ್ರೀ ಪತಂಜಲಿ ಸೌಹಾರ್ದ ಸಹಕಾರಿ ಸಂಘ ನಿ., ಪಾವಗಡ, ತುಮಕೂರು.
2. ಶ್ರೀ ರಮೇಶ್, ಕ್ರಾಂತಿಯೋಗಿ, ಮಾನ್ಯ ಅಧ್ಯಕ್ಷರು, ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ.
3. ಶ್ರೀ ಪ್ರತಾಪಗೌಡ ಪಾಟೀಲ್, ಮಾನ್ಯ ಅಧ್ಯಕ್ಷರು, ಶ್ರೀ ಗುರುರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಮಸ್ಕಿ, ರಾಯಚೂರು
4. ಶ್ರೀ ಸಂಜಯ ವಾಸುದೇವ ಅಡಕೆ, ಮಾನ್ಯ ಅಧ್ಯಕ್ಷರು, ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಬೆಳಗಾವಿ
5. ಶ್ರೀ ಪ್ರಕಾಶ ಪಿ ನಾಝುರೆ, ಮಾನ್ಯ ಅಧ್ಯಕ್ಷರು, ಶ್ರೀ ವಿಜಯಲಕ್ಷ್ಮೀ ಕ್ರೆಡಿಟ್ ಸೌಹಾದ ಸಹಕಾರಿ ನಿ., ಧಾರವಾಡ




ಉತ್ತಮ ಸಹಕಾರಿ ಪ್ರಶಸ್ತಿ ಪುರಸ್ಕೃತರು




ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು

## ಬೃಹತ್ ಉಚಿತ ಸಮಗ್ರ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ



ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಎಸ್.ಬಿ. ಶೆಟ್ಟಣ್ಣನವರ್‌ರವರು ಹಾಗೂ ಕಾನೂನು ಕೋಶದ ಜಂಟಿ ನಿಬಂಧಕರಾದ ಸನ್ಮಾನ್ಯ ಶ್ರೀ ಸುರೇಶ್‌ಗೌಡರವರು ಭೇಟಿ ನೀಡಿದರು.

ಶಿಬಿರದಲ್ಲಿ ಮಧುಮೇಹ ತಪಾಸಣೆ, ಡಯಾಬಿಟಿಕ್ ಫುಟ್, ABI, VPT, ವಿಶೇಷದಂತ ತಪಾಸಣೆ, ಬಾಯಿಯ ಕ್ಯಾನ್ಸರ್ ತಪಾಸಣೆ, ECG, ENT, ರಕ್ತ ಪರೀಕ್ಷೆ ಸೇರಿದಂತೆ 14 ಬಗೆಯ ಆರೋಗ್ಯ ಸೇವೆಗಳನ್ನು ವೀಕ್ಷಿಸಿ, ವ್ಯವಸ್ಥೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಹಕಾರಿ ಕ್ಷೇತ್ರದಲ್ಲಿ ಸಿಬ್ಬಂದಿಗಳ ಹಾಗೂ ಪ್ರತಿನಿಧಿಗಳ ಆರೋಗ್ಯದ ಹಿತ ದೃಷ್ಟಿಯಿಂದ ಇಂತಹ ಶಿಬಿರಗಳು ಅತ್ಯಗತ್ಯವಾಗಿದ್ದು, ಸೌಹಾರ್ದ ಸಂಯುಕ್ತ ಸಹಕಾರಿಯ ಈ ಕಾರ್ಯ ಶ್ಲಾಘನೀಯ ಎಂದು ಅವರು ಅಭಿಪ್ರಾಯಪಟ್ಟರು. ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಇದರ ಪ್ರಯೋಜನೆಯನ್ನು ಪಡೆದುಕೊಂಡರು.

## ಇಫ್ಕೋ ಟೋಕಿಯೋ ಜೀವ ವಿಮಾ ಹಾಗೂ ಸಾಲ ಭದ್ರತಾ ಯೋಜನೆ

ಸಹಕಾರಿಯ ಸದಸ್ಯರುಗಳ ಸಾಲ ಪಡೆದು ಅಕಸ್ಮಾತ್ತಾಗಿ ಯಾವುದಾದರೂ ಕಾಯಿಲೆ ಅಥವಾ ಅವಘಡದಲ್ಲಿ ನಿಧನ ಹೊಂದಿದರೆ ಅವರ ಜೀವಕ್ಕೆ ಹಾಗೂ ಅವನ ಪಡೆದ ಸಾಲಕ್ಕೆ ಇಫ್ಕೋ ಟೋಕಿಯೋ ಸಂಸ್ಥೆಯಿಂದ ವಿಮಾ ಸೌಲಭ್ಯ

ಇಫ್ಕೋ ಟೋಕಿಯೋ ಸಂಸ್ಥೆಯಿಂದ ಸಾಲ ಭದ್ರತಾ ಪತ್ತು ಜೀವ ವಿಮಾ ಯೋಜನೆಯಲ್ಲಿ ರಾಜ್ಯದ 34 ಸೌಹಾರ್ದ ಸಹಕಾರಿಗಳ ಮೂಲಕ ವಿವಿಧ ವಿಷಯಗಳಿಗೆ ಸಂಬಂದಿಸಿದಂತೆ ಇದುವರೆಗೆ ರೂ 1,08,73,724 ಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ. ಈ ವಿಮೆಯು ಎಲ್ಲ ವಿಧವಾದ ಸಾವುಗಳಿಗೆ ಅನ್ವಯಿಸುತ್ತದೆ.

ಇದುವರೆಗೆ 25 ಸಾವಿರ ಸದಸ್ಯರಿಗೆ ಜೀವ ವಿಮೆಯನ್ನು 271.11 ಕೋಟಿಗಳಿಗೆ 100ಕ್ಕೆ 100 ರಷ್ಟು ವಿಮಾ ಮೊತ್ತವನ್ನು 100 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಇತ್ಯರ್ಥಗೊಳಿಸಲಾಗಿದೆ. ಇಫ್ಕೋ ಟೋಕಿಯೂ ಸಂಸ್ಥೆಯು ಈ ಕಾರ್ಯವನ್ನು ಮೆ. ಕಾರ್ಪೋರೇಟ್ ರಿಸ್ಕ್ ಇಂಡಿಯಾ ಇನ್ಸೂರೆನ್ಸ್ ಬ್ರೋಕರ್ಸ್ ಪ್ರೈವೇಟ್ ಲಿಮಿಟೆಡ್ ಮೂಲಕ ನಿರ್ವಹಿಸುತ್ತಿದೆ.

## ನಾಗನೂರು ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಿಬ್ಬಂದಿಗಳ ಅಧ್ಯಯನ ಪ್ರವಾಸ"

**ನಾಗನೂರ : ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ** ಇದರ ಸನ್ 2026-27 ನೇ ಸಾಲಿನ ಸಂಘದ ಸರ್ವ ಸಿಬ್ಬಂದಿಯ "ಅಧ್ಯಯನ ಪ್ರವಾಸ"ವನ್ನು ಹಮ್ಮಿಕೊಳ್ಳಲಾಗಿತ್ತು. ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಸಹಕಾರಿಯಾದ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಶಿವಮೊಗ್ಗ ಸಹಕಾರಿಗೆ ಮಂಗಳವಾರ ದಿನಾಂಕ 25-08-2026 ರಂದು ಸೌಹಾರ್ದಯುತ ಭೇಟಿ ನೀಡಿ ಸಂಘದ ಬೆಳವಣಿಗೆಗಾಗಿ ಉಪಯುಕ್ತವಾಗುವ ಹಲವಾರು ಮಾಹಿತಿಯನ್ನು ಹಾಗೂ ದಾಖಲೆಗಳ ನಿರ್ವಹಣೆ ಬಗ್ಗೆ, ವ್ಯವಹಾರ ಅಭಿವೃದ್ಧಿಯ ಬಗ್ಗೆ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಶಿವಮೊಗ್ಗ ಇದರ ಅಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಶ್ರೀಮತಿ ಮಾಲತಿ ಎಂ.ಪಿ ಇವರು ಮಾಹಿತಿ ನೀಡಿದರು.

**ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ದರ್ಬೆ, ಪುತ್ತೂರು** ಸಹಕಾರಿಗೆ ಸೋಮವಾರ ದಿನಾಂಕ 24-08-2026 ರಂದು ಸೌಹಾರ್ದಯುತ ಭೇಟಿ ನೀಡಿ ಸಂಘದ ಬೆಳವಣಿಗೆಗಾಗಿ ಉಪಯುಕ್ತವಾಗುವ ಹಲವಾರು ಮಾಹಿತಿಯನ್ನು ಹಾಗೂ ದಾಖಲೆಗಳ ನಿರ್ವಹಣೆ ಬಗ್ಗೆ, ವ್ಯವಹಾರ ಅಭೀವೃದ್ದೀಯ ಬಗ್ಗೆ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ದರ್ಬೆ, ಪುತ್ತೂರು ಇದರ ಉಪಪ್ರಧಾನ ವ್ಯವಸ್ಥಾಪಕಿಯಾದ ಶ್ರೀಮತಿ. ಭವಾಣಿ ಪ್ರಭು ಇವರು ಮಾಹಿತಿ ನೀಡಿದರು.

**ಶಿವಮೊಗ್ಗ ಜಿಲ್ಲೆಯ ಪ್ರತಿಷ್ಟೀತ ಸಹಕಾರಿಯಾದ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ** ಸಹಕಾ-ರಿಗೆ ಮಂಗಳವಾರ ದಿನಾಂಕ 25-08-2026 ರಂದು ಸೌಹಾರ್ದಯುತ ಭೇಟಿ ನೀಡಿ ಸಂಘದ ಬೆಳವಣಿಗೆಗಾಗಿ ಉಪಯುಕ್ತವಾಗುವ ಹಲವಾರು ಮಾಹಿತಿಯನ್ನು ಹಾಗೂ ದಾಖಲೆಗಳ ನಿರ್ವಹಣೆ ಬಗ್ಗೆ, ವ್ಯವಹಾರ ಅಭೀವೃದ್ದೀಯ ಬಗ್ಗೆ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಪ್ರಧಾನ ವ್ಯವಸ್ಥಾಪಕಿಯಾದ ಶ್ರೀಮತಿ ಪಿ.ಎಂ. ಜಯಂತಿ ಇವರು ಮಾಹಿತಿ ನೀಡಿದರು.

ಸದರಿ ಅಧ್ಯಯನ ಪ್ರವಾಸದಲ್ಲಿ ಸಂಘದಿಂದ 05 ಜನ ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಣಾಧಿಕಾ-ರಿಯನ್ನು ಒಳಗೊಂಡು 22 ಜನ ಶಾಖಾ ವ್ಯವಸ್ಥಾಪಕರು ಮತ್ತು 48 ಜನ ಗುಮಾಸ್ತ/ಸಿಪಾಯಿ ವರ್ಗದ ಸಿಬ್ಬಂದಿ, 21 ಜನ ಪಿಗ್ಮೀ ಸಂಗ್ರಹಕಾರರು ಹೀಗೆ ಒಟ್ಟು 96 ಜನರ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಗಿತ್ತು.

# ಸಹಕಾರ ಸಂಘಗಳ ಲೆಕ್ಕ ಪರಿಶೋದನೆಗಾಗಿ ಪರ್ಯಾಯ ಯೋಜನೆ

## - ಸಹಕಾರ ಸಚಿವ ಶ್ರೀ ಲಕ್ಷ್ಮಣ ಎಸ್. ಸವದಿ



ಸಹಕಾರ ಸಚಿವ ಶ್ರೀ ಲಕ್ಷ್ಮಣ ಎಸ್. ಸವದಿಯವರು ಸಹಕಾರ ಆಡಿಟ್ ಇಲಾಖೆಯಲ್ಲಿ ಸಿಬ್ಬಂದಿಯವರ ಸಂಖ್ಯೆ ಕಡಿಮೆ ಇರುವುದರಿಂದ ಆಡಿಟ್ ಸಮರ್ಪಕವಾಗಿ ಸಕಾಲದಲ್ಲಿ ಆಗುತ್ತಿಲ್ಲ. ಅದಕ್ಕಾಗಿ ಚಾರ್ಟರ್ಡ್ ಅಕೌಂಟೆಂಟ್ ಇವರುಗಳಿಂದ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಮಾಡಿಸಬೇಕೆಂದು ತೀರ್ಮಾನಿಸಿ ಅದರಂತೆ ಕ್ರಮವಿಡಲಾಯಿತು. ಆದಾಗ್ಯೂ ಕೂಡ ಆಡಿಟ್ ಸಮರ್ಪಕವಾಗಿ ಸಕಾಲದಲ್ಲಿ ನಡೆಯುತ್ತಿಲ್ಲ. ಇದಕ್ಕಾಗಿ ಒಂದು ಪರ್ಯಾಯ ಯೋಜನೆಯನ್ನು ಸಿದ್ಧಪಡಿಸಿದ್ದೇನೆ ಅದರಂತೆ ಕ್ರಮವಿಡಲಾಗುವುದು ಎಂದು ತಿಳಿಸಿದ್ದಾರೆ.

ಈ ಯೋಜನೆ ಪ್ರಕಾರ ರಾಜ್ಯದಲ್ಲಿ ನಿರುದ್ಯೋಗರಾಗಿರುವ ಬಿ.ಕಾಮ್, ಬಿ.ಬಿ.ಎ ಎಮ್.ಬಿ.ಎ ಪದವಿಧರರಿಗೆ 6 ತಿಂಗಳು ಸಹಕಾರಿ ಆಡಿಟ್ ವ್ಯವಸ್ಥೆಯ ಬಗ್ಗೆ ತರಬೇತಿ ನೀಡುವುದು. ತರಬೇತಿಯನ್ನು ರಾಜ್ಯದ 8 ಕೇಂದ್ರಗಳಲ್ಲಿ ನಿರ್ವಹಿಸುವುದು. ತರಬೇತಿಯನ್ನು ಉಚಿತವಾಗಿ ನೀಡುವುದು. ತರಬೇತಿ ಪಡೆದ ನಂತರ ಅವರಗೆ ಸಹಕಾರ ಸಂಘಗಳ ಆಡಿಟ್ ಕಾರ್ಯವನ್ನು ವಹಿಸುವುದು. ಅವರುಗಳಿಗೆ ಸಂಬಳ ನಿಗದಿಮಾಡಿ ಪಾವತಿಸುವ ವ್ಯವಸ್ಥೆ ಮಾಡುವುದಾಗಿದೆ. ಈ ವ್ಯವಸ್ಥೆಯ ನಿವಾರಣೆಗಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಲಾಭದಲ್ಲಿ ಪಾವತಿಸುವ 2% ಸಹಕಾರ ಶಿಕ್ಷಣ ನಿಧಿಯನ್ನು ಬಳಸಿಕೊಳ್ಳಲಾಗುವುದೆಂದು ಸಚಿವರು ತಿಳಿಸಿದರು. ಇದರಿಂದ ನಿರುದ್ಯೋಗ ನಿವಾರಣೆಗೆ ಕ್ರಮವಿಟ್ಟಂತಾಗುತ್ತದೆ.

# ಪ್ರವೇಶ ತರಬೇತಿ ಕಾರ್ಯಕ್ರಮ



**ಕೊಪ್ಪಳ :** ದಿನಾಂಕ 29.09.2026ರಂದು ಕೊಪ್ಪಳ ಜಿಲ್ಲೆಯ 2024–25 ಮತ್ತು 2025–26ನೇ ಸಾಲಿನಲ್ಲಿ ನೂತನವಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕ–ರಿಗಾಗಿ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಲಲಿತ ಮಹಲ್ ಗಂಗಾವತಿ ಇಲ್ಲಿ ಆಯೋಜಿಸಲಾಗಿತ್ತು. ಪ್ರವೇಶ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪಾ ಪತ್ತಾರವರು ಹಾಗೂ ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಕುಮಾರೆಪ್ಪಾರವರು, ಉಪಸ್ಥಿತರಿದ್ದರು. ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧನಾ ವರದಿಯ ಪೂರ್ವ ಸಿದ್ದತೆ ಕುರಿತ ಶ್ರೀ ವಿನಾಯಕ ಲೆಕ್ಕಪರಿಶೋಧಕರು ಇವರು ಉಪನ್ಯಾಸ ನೀಡಿದರು. ಆಡಳಿತ ಮಂಡಳಿಯ ಅಧಿಕಾರಿಗಳು ಮತ್ತು ಪ್ರಕಾರ್ಯಗಳು, ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಒಂಕಾರ ರವರು ಉಪನ್ಯಾಸ ನೀಡಿದರು. ಪ್ರವೇಶ ತರಬೇತಿ ಕಾರ್ಯಕ್ರಮದಲ್ಲಿ 61 ಸಹಕಾರಿಗಳಿಂದ 101 ಪ್ರತಿನಿಧಿಗಳು ಭಾಗವಹಿಸಿದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ಮೈಸೂರು :** ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 24.09.2026 ಗುರುವಾರ ಬೆಳಿಗ್ಗೆ 10.30 ಗಂಟೆಗೆ ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿ., ನಂ.48, 2ನೇ ಮುಖ್ಯ ರಸ್ತೆ, 18ನೇ ಅಡ್ಡರಸ್ತೆ, ಜಯನಗರ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಮಹದೇವಸ್ವಾಮಿ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿ., ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ

ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಸುರೇಶ ಆರ್ ಎಸ್ ಇವರು ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ. ಭಗೀರಥ ರವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ 40 ಸೌಹಾರ್ದ ಸಹಕಾರಿಗಳಿಂದ 45 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಸಹಕಾರಿಯಲ್ಲಿ ದಾಖಲಾತಿ ನಿರ್ವಹಣೆ ಕುರಿತು ನಿರ್ವಹಣೆ" ಈ ವಿಷಯದ ಕುರಿತು ಉಪನ್ಯಾಸವನ್ನು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ ಜಿ ಸಂಕೀರ್ತನ್ ಇವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ ಸಹಕಾರಿಯಲ್ಲಿ "ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಕೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬರುವ ನ್ಯೂನ್ಯತೆಗಳು ಹಾಗೂ ಅನುಪಾಲನೆ" ಈ ವಿಷಯದ ಕುರಿತು ಉಪನ್ಯಾಸವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ಇವರು ಉಪನ್ಯಾಸ ನೀಡಿದರು.



**ಕಲಬುರಗಿ :** ದಿನಾಂಕ 30.09.2026ರಂದು ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಲಬುರಗಿ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜ ತಪಲಿ ಮತ್ತು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ಉಪಸ್ಥಿತರಿದ್ದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಲಬುರಗಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್ ರವರು ಕಲಂ–34 ಮಾಹಿತಿ ಮತ್ತು ಆರ್ಥಿಕ ಸಭಲತೆ ಮಾನದಂಡ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 32 ಸಹಕಾರಿಗಳಿಂದ 46 ಜನ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

**ಬೆಳಗಾವಿ:** ದಿನಾಂಕ 01.09.2026 ರಂದು ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಗ್ರಾಮದಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಾಗಾರವನ್ನು ಶ್ರೀ ಶಿವಬಸವೇಶ್ವರ ಸೌಹಾರ್ದ ಸಹಕಾರಿ ನಿ., ಹಿರೇಬಾಗೇವಾಡಿಯಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಸಂಯುಕ್ತ ಸಹಕಾರಿ ಸುತ್ತೋಲೆ , ಕಲಂ 34ರ ಮಾಹಿತಿ, ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ, ಲೆಕ್ಕಪರಿಶೋಧನಾ ಸಲ್ಲಿಕೆ ಕುರಿತು ಮಾಹಿತಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠ ನೀಡಿದರು. ಸದರಿ ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

**ರಾಯಚೂರು :** ದಿನಾಂಕ 29.09.2026 ರಂದು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಲಿಂಗಸೂಗೂರಿನ ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ. ಇದರ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಸೌಹಾರ್ದ ಕಾಯ್ದೆಯ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ವಿಧಾನ, ಚುನಾವಣೆ ಹಾಗೂ ಕಾಯ್ದೆ ತಿದ್ದುಪಡಿಯ ಪ್ರಮುಖ ಅಂಶಗಳು ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜ ರವರು ಮಾಹಿತಿ ನೀಡಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಲಿಂಗಸೂಗೂರು ತಾಲ್ಲೂಕಿನ ಒಟ್ಟು 32 ಸೌಹಾರ್ದ ಸಹಕಾರಿಗಳಿಂದ 42 ಜನರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

**ವಿಜಯನಗರ :** ದಿನಾಂಕ 30.09.2026 ರಂದು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಶ್ರೀ ಸಿರಿ ಸೌಹಾರ್ದ ಸಹಕಾರಿ ಸಂಘ ನಿ., ಹೂವಿನಹಡಗಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಸೌಹಾರ್ದ ಕಾಯ್ದೆಯ ಕಲಂ 34ರ ಮಾಹಿತಿ ಸಲ್ಲಿಸುವಿಕೆ, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ವಿಧಾನ, ಲಾಭಾಂಶ ವಿಂಗಡಣೆ, ಶಾಸನಬದ್ಧ ಪಾವತಿಗಳು ಸಹಕಾರಿಗಳ ಇತರೆ ಸಮಸ್ಯೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶೆಟ್ಟಿ ರವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕಲಬುರಗಿ ಪ್ರಾಂತೀಯ ಅಧಿಕಾರಿಯವರು ಉಪಸ್ಥಿತರಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ ಲಿಂಗಸೂಗೂರು ತಾಲ್ಲೂಕಿನ ಒಟ್ಟು 20 ಸೌಹಾರ್ದ ಸಹಕಾರಿಗಳಿಂದ 25 ಜನ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

# ಸಂಯುಕ್ತ ಸಹಕಾರಿಗೆ “ತ್ರಿಭುವನ್ ಸಹಕಾರಿ ಯುನಿರ್ವಸಿಟಿ” ಸಂಸ್ಥೆಯ ಉಪಕುಲಪತಿ ಪ್ರೊ. ಸಂಜಯ್ ಪ್ರತಾಪ್ ಸಿಂಗ್ ಭೇಟಿ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಕೇಂದ್ರ ಕಛೇರಿಗೆ ದಿನಾಂಕ 03.10.2026 ರಂದು “ತ್ರಿಭುವನ್ ಸಹಕಾರಿ ಯುನಿರ್ವಸಿಟಿ” ಅಹಮದಬಾದ್, ಗುಜರಾತ್ ಇದರ ಉಪಕುಲಪತಿಗಳಾದ ಪ್ರೊ. ಸಂಜಯ್ ಪ್ರತಾಪ್ ಸಿಂಗ್ ಹಾಗೂ ಪ್ರೊ ರಾಜೇಶ್ ಜೈನ್, ಕೋ–ಚೇರ್ ಪರ್ಸ್‌ನ್ (ದಾಖಲಾತಿ) ವಿಭಾಗ ಇವರು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಆತ್ಮೀಯವಾಗಿ ಸಹಕಾರಿ ಶಾಲು ಹಾಗೂ ಹೂಗುಚ್ಚ ನೀಡುವ ಮೂಲಕ ಸ್ವಾಗತಿಸಿದರು. ಇವರಿಗೆ ಸಂಯುಕ್ತ ಸಹಕಾರಿಯಲ್ಲಿನ ಬೆಳವಣಿಗೆ, ಡಿಸಿಬಿಎಮ್ ಕೋರ್ಸಿನ ಬಗ್ಗೆ, ತರಬೇತಿ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಉಪಪ್ರಧಾನ ವ್ಯವಸ್ಥಾಪಕರು, ಸಹ ಪ್ರಧಾನ ವ್ಯವಸ್ಥಾಪಕರು, ಅಧಿಕಾರಿಗಳು, ಸಿಬ್ಬಂದಿಯವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವತಿಯಿಂದ ಅತಿಥಿ ಗಣ್ಯರಿಗೆ ಸನ್ಮಾನವನ್ನು ಮಾಡಲಾಯಿತು.

## ಭೇಟಿ



**ಕಲಬುರಗಿ :** ದಿನಾಂಕ. 20–09–2026ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ರವರು ಕಲಬುರಗಿ ಪ್ರಾಂತಿಯ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಿಬ್ಬಂದಿಗಳ ಜೊತೆ ಕಚೇರಿಯ ಕೆಲಸ ಕಾರ್ಯಗಳ ಕುರಿತು ಚರ್ಚಿಸಿದರು ಹಾಗೂ ಸಲಹೆ ಮತ್ತು ಮಾರ್ಗದರ್ಶನ ನೀಡಿದರು ಈ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಪ್ರಾಂತಿಯ ಅಧಿಕಾ–ರಿಯಾದ ಶ್ರೀ ಸಂಜಯ ಕೋರಟಕರ ಹಾಗೂ ಕಲಬುರಗಿ ಪ್ರಾಂತಿಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಉದ್ಘಾಟನೆ



**ಉಡುಪಿ :** ಶ್ರೀಕೃಷ್ಣ ಸೌಹಾರ್ದ ಸಹಕಾರಿ ಸಂಘದ ಸಾಮಾನ್ಯ ಸೇವಾ ಕೇಂದ್ರದ (ಸಿ.ಎಸ್.ಸಿ) ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿರವರು, ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ವಿಜಯ್.ಬಿ.ಎಸ್. ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.



**ತುಮಕೂರು :** ದಿನಾಂಕ 23.09.2026ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ತುಮಕೂರು ಇದರ 2025–26ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ರವರು ವಹಿಸಿದ್ದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಒಕ್ಕೂಟದ ಆಡಳಿತ ಮಂಡಲಿ ನಿರ್ದೇಶಕರು, ಸದಸ್ಯ ಸಹಕಾರಿಗಳು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ಮತ್ತು ಕಿರಿಯ ಸಹಾಯಕರಾದ ಶ್ರೀ ಗೋವಿಂದ ಉಪಸ್ಥಿತರಿದ್ದರು.

# ವಾರ್ಷಿಕ ಸಾಮಾನ್ಯ ಸಭೆ



**ಶಿವಮೊಗ್ಗ :** ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 2025–26 ನೇ ಸಾಲಿನ ಸರ್ವ–ಸದಸ್ಯರ ಸಭೆಯು ದಿನಾಂಕ 17/09/2026 ರಂದು ತೀರ್ಥಹಳ್ಳಿಯ ಸುವರ್ಣ ಸಹಕಾರ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಟ್ಟೇಗದ್ದೆ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಇದೇ ಸಂಧರ್ಭದಲ್ಲಿ ಶಂಕರ ಕಣ್ಣಿನ ಆಸ್ಪತ್ರೆಯವರಿಂದ ಉಚಿತ ನೇತ್ರಾ ತಪಾಸಣಾ ಶಿಭಿರ ಏರ್ಪಡಿಸಿದ್ದು ಯಶಸ್ವಿಯಾಗಿ ನಡೆಯಿತು.

ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿಯು ದಿನಾಂಕ: 23/11/2010 ರಂದು ಉದ್ಘಾಟನೆಗೊಂಡು ಇಂದು ಅತ್ಯುತ್ತಮ ಸಹಕಾರ ಸಂಸ್ಥೆಯಾಗಿ ಹೊರಹೊಮ್ಮಿದೆ. ಬ್ಯಾಂಕಿಂಗ್ ವ್ಯವಹಾರದ ಜೊತೆಗೆ ಅಡಿಕೆ, ಇ–ಸ್ಟಾಂಪಿಂಗ್, ಸುಪ್ರೀಂ ಟಾರ್ಪಲ್ಸ್, ಗೊಬ್ಬರ ಮಾರಾಟ ಸೌಲಭ್ಯವನ್ನು ನೀಡುತ್ತಿದ್ದು, ಸದಸ್ಯರು ಇದರ ಸದುಪಯೋಗ ಪಡೆಯುತ್ತಿದ್ದಾರೆ.

**ಎರಡು ಸಹಕಾರ ಕಾಯ್ದೆಯಡಿಯಲ್ಲಿ ಕಾರ್ಯ ನಿರ್ವಹಿಸುವ ಏಕೈಕ ರಾಜ್ಯ ಕರ್ನಾಟಕ ಮಾತ್ರ – ಎ.ಆರ್. ಪ್ರಸನ್ನಕುಮಾರ್**

2025–26ನೇ ಸಾಲಿನಲ್ಲಿ ರೂ 30,06,803.16 ಗಳ ನಿವ್ವಳ ಲಾಭ ಗಳಿಸಿದೆ. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ,ಆರ್, ಪ್ರಸನ್ನಕುಮಾರ್‌ರವರು ಮಾತನಾಡಿ ಸಹಕಾರಿ ಕ್ಷೇತ್ರ ಹಾಗೂ ಸೌಹಾರ್ದ ಸಹರಾರಿಗಳ ಬೆಳವಣಿಗೆ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಣೆ ನೀಡಿ, ಕವಲೇದುರ್ಗ ಸೌಹಾರ್ದ ಸಹಕಾರಿಯ ಬೆಳವಣಿಗೆ ಹಾಗೂ ಸಾಧನೆಯ ಬಗ್ಗೆ ಪ್ರಶಂಶಿಸಿದರು. ಸಭೆಯಲ್ಲಿ ಸದಸ್ಯರುಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಸಹಕಾರಿಯ ಕಾರ್ಯವೈಖರಿ ಬಗ್ಗೆ ಶ್ಲಾಘಿಸಿದರು. ಕಸ್ತೂರಿ ರಂಗನ್ ವರದಿಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಡ ತರುವಂತೆ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು

---




**ಪುತ್ತೂರು :** ಪುತ್ತೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿ ರಾಜ್ಯದಾದ್ಯಂತ 23 ಶಾಖೆಗಳೊಂದಿಗೆ ಕಾರ್ಯಾಚರಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 25ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ ಚಂದ್ರರವರ ಅಧ್ಯಕ್ಷತೆಯಲ್ಲಿ ದಿನಾಂಕ 06–09–2026ನೇ ಭಾನುವಾರದಂದು ಒಕ್ಕಲಿಗ ಗೌಡ ಸಮುದಾಯ ಭವನ, ತೆಂಕಿಲ, ಪುತ್ತೂರು ಇಲ್ಲಿ ನಡೆಯಿತು.

ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರು, ಸಹಕಾರಿಯು 25 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 800 ಕೋಟಿ ರೂಪಾಯಿ ದಾಖಲೆ ವ್ಯವಹಾರ ದಾಖಲಿಸಿದೆ. ಸಂಘದ ಈ ಪ್ರಗತಿಗೆ ಸದಸ್ಯರು ಹಾಗೂ ನಿರ್ದೇಶಕರ ಸಹಕಾರವೇ ಪ್ರಮುಖ ಕಾರಣವಾಗಿದೆ ಎಂದರು. ಸಹಕಾರಿ ಕ್ಷೇತ್ರದಲ್ಲಿ ಸರಸ್ವತಿಯು ಬೆಳೆದಂತೆ ತಾನು ಬೆಳೆಯಲು ಶ್ರೀ ಸರಸ್ವತಿ ಸಹಕಾರಿ ಸಂಘವೇ ಪ್ರಮುಖ ಕಾರಣವಾಗಿದೆ ಎಂದು ಹೇಳಿದ ಸದಸ್ಯರೋರ್ವರ ಮಾತನ್ನು ಉಲ್ಲೇಖಿಸಿದ ಅವರು, ಸ್ಟ್ಯಾಂಪ್ ಪೇಪರಿಗಾಗಿ ಸಾರ್ವಜನಿಕರು ದೀರ್ಘಕಾಲ ಕಾಯಬೇಕಾಗುತ್ತಿದ್ದ ಸಮಸ್ಯೆಯನ್ನು ಮನಗಂಡು, ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಇ–ಸ್ಟ್ಯಾಂಪ್ ಸೌಲಭ್ಯವನ್ನು ಕಲ್ಪಿಸಿದ ಸಹಕಾರಿ ಸಂಘ ಎಂಬ ಹೆಗ್ಗಳಿಕೆ ಶ್ರೀ ಸರಸ್ವತಿಗೆ ಇದೆ ಎಂದರು.

ಸಂಘದ ಆಡಳಿತ ಕಚೇರಿಗಾಗಿ ಸ್ವಂತ ನಿವೇಶನವನ್ನು ಖರೀದಿಸಿ ಕಟ್ಟಡ ನಿರ್ಮಿಸುವ ಉದ್ದೇಶ ಹೊಂದಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ. ಮುಂದಿನ ಮಾರ್ಚ್ ಅಂತ್ಯದ ವೇಳೆಗೆ 1001 ಕೋಟಿ ರೂಪಾಯಿ ವ್ಯವಹಾರದ ಗುರಿ ಹೊಂದಲಾಗಿದೆ. ಸಂಸ್ಥೆಯ ಅಭಿವೃದ್ಧಿಗೆ ಸದಸ್ಯರು ಮತ್ತಷ್ಟು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸಹಕಾರಿಯ ಪೂರಕ ಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮಹಿಳಾ ಸಬಲೀಕರಣ, ಯುವ ಸಬಲೀಕರಣ, ವೈದ್ಯಕೀಯ ನೆರವು, ವಿದ್ಯಾರ್ಥಿವೇತನ, ವಿವಿಧ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಪದವೀಧರ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಸಬಲೀಕರಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುತ್ತಿದೆ. ಈಗಾಗಲೇ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮೂಲಕ ಸುಮಾರು 2 ಕೋಟಿ ರೂಪಾಯಿ ಮೊತ್ತದ ಸೇವಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ. ಇವರು ಸಹಕಾರಿಯ ಅಂಕಿ–ಅಂಶಗಳನ್ನು ಉಲ್ಲೇಖಿಸುತ್ತಾ, ರಾಜ್ಯದಾದ್ಯಂತ 23 ಶಾಖೆಗಳ ಮೂಲಕ ಸದಸ್ಯರಿಗೆ ಸೇವೆಯನ್ನು ನೀಡುತ್ತಿರುವ ಸಹಕಾರಿಯು 2025–26ರ ಆರ್ಥಿಕ ವರ್ಷಾಂತ್ಯಕ್ಕೆ ಸಹಕಾರಿಯಲ್ಲಿ 52,431 ಸದಸ್ಯರು, ರೂ. 10.29 ಕೋಟಿ ಪಾಲು

ಬಂಡವಾಳದೊಂದಿಗೆ, ಸಹಕಾರಿಯು ರೂ. 45.81 ಕೋಟಿ ಸ್ವಂತ ನಿಧಿಯನ್ನು ಹೊಂದಿ ದೃಢವಾಗಿದೆ. ಸಹಕಾರಿಯು ತನ್ನ ಸದಸ್ಯರಿಂದ ರೂ. 413.65 ಕೋಟಿ ಠೇವಣಾತಿಯನ್ನು ಸಂಗ್ರಹಿಸಿ, ರೂ. 387.46 ಕೋಟಿ ಸಾಲವನ್ನು ವಿತರಿಸಲಾಗಿದೆ. ಒಟ್ಟು ವ್ಯವಹಾರ ರೂ. 801.11 ಕೋಟಿಯಾಗಿದ್ದು, ರೂ. 7.27 ಕೋಟಿ ನಿವ್ವಳ ಲಾಭ ದಾಖಲಿಸಿದೆ ಎಂದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು 2025–26ನೇ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸಿದರು. ಸದಸ್ಯರಿಗೆ ಶೇ. 13 ಡಿವಿಡೆಂಡ್‌ಅನ್ನು ಸಭೆಯಲ್ಲಿ ಘೋಷಿಸಲಾಯಿತು. ಸಭೆಯಲ್ಲಿ ಸಹಕಾರಿಯ ಸದಸ್ಯರುಗಳು ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.

ವೇದಿಕೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕೋಲಾರ :** ದಿನಾಂಕ 05.09.2026ರಂದು ಜರುಗಿದ ಸ್ವರ್ಣವಿಲಾಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ, ಕೆಜಿಎಫ್, ಕೋಲಾರ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉದ್ಘಾಟಕರಾಗಿ ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಮಾರ್ಗದರ್ಶನ ನೀಡಿದರು.



**ದಾವಣಗೆರೆ :** ದಿನಾಂಕ 06.09.2026ರಂದು ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ದಾವಣಗೆರೆ ಇದರ 17ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದರಿ ಸಹಕಾರಿಯ ಉಪಾಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಭಾಗವಹಿಸಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾರ್ಗದರ್ಶನ ನೀಡಿದರು.




**ದಾವಣಗೆರೆ :** ದಿನಾಂಕ 19.09.2026ರಂದು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ದಾವಣಗೆರೆ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಒಕ್ಕೂಟದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸುತ್ತಾ ಸದಸ್ಯ ಸಹಕಾರಿಗಳು ಒಕ್ಕೂಟದ ಕಾರ್ಯದಲ್ಲಿ ಭಾಗವಹಿಸಿ ಸಂಘಟಿತರಾಗಬೇಕಾಗಿದೆ ಎಂದು ತಿಳಿಸಿದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ವಹಿಸಿದ್ದರು. ಒಕ್ಕೂಟದ ಎಲ್ಲಾ ನಿರ್ದೇಶಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್ ಹಾಗೂ ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್. ರವರು ಉಪಸ್ಥಿತರಿದ್ದರು.



**ದಾವಣಗೆರೆ :** ದಿನಾಂಕ 20.09.2026ರಂದು ದಿ ವೆಜಿಟೆಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿ, ದಾವಣಗೆರೆ ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸದಸ್ಯ ಕರ್ತವ್ಯಗಳೂ ಹಾಗೂ ನಿರ್ದೇಶಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಸಾಮಾನ್ಯ ಸಭೆಯಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜೆ.ಕೆ. ಶಿವಕುಮಾರ್ ರವರು ವಹಿಸಿದ್ದರು. ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್. ರವರು ಭಾಗವಹಿಸಿದ್ದರು.



**ದಕ್ಷಿಣ ಕನ್ನಡ :** ದಿನಾಂಕ 01.09.2026 ರಂದು ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ಸಂಘ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯನ್ನು ಆಯೋಜಿಸಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್ ರವರು ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಂದನ್ ಬಿ.ಎನ್. ರವರು ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳು ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು.




**ದಕ್ಷಿಣ ಕನ್ನಡ :** ದಿನಾಂಕ 11.09.2026 ರಂದು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿ., ಇದರ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರದ ಶ್ರೀಮತಿ ಭಾರತಿ ಜಿ. ಭಟ್ ರವರು ಭಾಗವಹಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಂದನ್ ಬಿ.ಎನ್. ರವರು ಸಭೆಯಲ್ಲಿ ಭಾಗವಹಿಸಿದರು.



**ಮೈಸೂರು :** ದಿನಾಂಕ 22.09.2026 ರಂದು ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘ ನಿ., ಇದರ 8ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹಾದೇವಸ್ವಾಮಿ ಇವರು ಭಾಗವಹಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಕಲಬುರಗಿ :** ದಿನಾಂಕ.23.09.2026ರಂದು ಶ್ರೀ ಶ್ರೀಶೈಲ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿ ಇದರ 19ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ಉದ್ಘಾಟಿಸಿದರು. ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು. ಸದರಿ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದರು.



**ವಿಜಯಪುರ :** ದಿನಾಂಕ 19.09.2026 ರಂದು ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ ಇದರ ಪ್ರಥಮ ವರ್ಷದ ವಾರ್ಷಿಕ ಮಹಾಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿ ನಿ, ಇದರ ಮಾನ್ಯ ನಿರ್ದೇಶಕರಾದ ಶ್ರೀ ಸಂಜಯ್ ಪಾಟೀಲ್ ಕನ್ಮಡಿ ಇವರು ವಹಿಸಿದ್ದರು.

ಸಭೆಯ ಆರಂಭದಲ್ಲಿ ಒಕ್ಕೂಟದ ಉಪಾಧ್ಯಕ್ಷ ಚಂದ್ರಶೇಖರ ಕವಟಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರಾದ ಅರುಣ ಮಠ, ಆರ್.ಡಿ.ಕುಲಕರ್ಣಿ, ಚಂದ್ರಶೇಖರ ಪಾಟೀಲ, ಸಿದ್ದು ಮಲ್ಲಿಕಾರ್ಜುನ ಮಠ, ದೀಪಕ ಶಿಂತ್ರೆ, ಪರಶುರಾಮ ಚಿಂಚಳಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಬಸವರಾಜ. ಎಸ್ ಹಾಗೂ ಒಕ್ಕೂಟದ 44 ಸದಸ್ಯರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.ಸಭೆಯ ನಿರೂಪಣೆಯನ್ನು ಯಮನಪ್ಪ ಸಾತಿಹಾಳ ನೆರವೇರಿಸಿದರು. ಸಭೆಯ ವಿಷಯಗಳನ್ನು ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಂಪನಗೌಡ ಪಾಟೀಲ ಮಂಡಿಸಿದರು. ನಿರ್ದೇಶಕ ಅರುಣ ವಾರದ ವಂದಿಸಿದರು.




**ಗದಗ :** ದಿನಾಂಕ 19.09.2026 ರಂದು ಗದಗ ಜಿಲ್ಲೆಯ ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಗದಗ ಇದರ 12 ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಲಾಯನ್ಸ ಭವನ, ಗಾಂಧಿ ಚೌಕ ಗದಗದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಯ ಸಂಸ್ಥಾಪಕರಾದ ಶ್ರೀ ಜಿ. ಎಮ್. ಪಲ್ಲೇದ ನೇರವೇರಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಯ್ಯಎಸ್.ಶಿವಕಾಳಿಮಠ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ ಅವರು ಉಪಸ್ಥಿತರಿದ್ದರು. ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿಗಳು, ಸರ್ವ ಸದಸ್ಯರು ಉಪಸ್ಥಿತರಿದ್ದರು.



**ಹಾವೇರಿ :** ದಿನಾಂಕ 19.09.2026 ರಂದು ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ಸಹಕಾರಿ ಸಂಘ ನಿ., ಹಾವೇರಿ ಇದರ 32ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಹಾವೇರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಸರ್ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿ ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಉದಯ್ ಕುರುಡೇಕರ್ ಅವರನ್ನು ಸನ್ಮಾನಿಸಿದರು. ಈ ಸಂಧರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿ ಸದಸ್ಯರು ಉಪಸ್ಥಿತರಿದ್ದರು.




**ಶಿವಮೊಗ್ಗ :** ದಿನಾಂಕ 21.09.2026ರಂದು ಸಹ್ಯಾದ್ರಿ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ಶಿವಮೊಗ್ಗ ಇದರ ವಾರ್ಷಿಕ ಮಹಾಸಭೆಯು ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿ ಸೌಹಾರ್ದ ಸಹಕಾರಿಗಳ ಚುನಾವಣಾ ಪ್ರಕ್ರಿಯೆ ಮತ್ತು ಸಹಕಾರಿಗಳು ಸಲ್ಲಿಸಬೇಕಾದ ವರದಿಗಳ ಕುರಿತು ಮಾಹಿತಿ ನೀಡಿದರು. ಸದರಿ ಸಭೆಯಲ್ಲಿ 50 ಜನ ಸದಸ್ಯರು ಭಾಗವಹಿಸಿದ್ದರು.



**ವಿಜಯಪುರ :** ದಿನಾಂಕ 13.09.2026 ರಂದು ಶ್ರೀ ನೀಲಕಂಠೇಶ್ವರ್ ಸೌಹಾರ್ದ ಸಹಕಾರಿ ಸಂಘ ನಿ., ವಿಜಯಪುರ ಇದರ 19ನೇ ವಾರ್ಷಿಕ ಸಾಮಾನ್ಯ ಸಭೆ ಜರುಗಿತು. ಕಾರ್ಯಕ್ರಮದ ದಿವ್ಯಾಸಾನಿದ್ಯವನ್ನು ಪ. ಪೂ: ಯೋಗೇಶ್ವರಿ ಮಾತಾಜಿ ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರಾಮನಗೌಡ ಬ ಪಾಟೀಲ, ಮಾನ್ಯ ಮಾಜಿ ನಿರ್ದೇಶಕರು ಸಂಯುಕ್ತ ಸಹಕಾರಿ ನಿ., ಹಾಗೂ ಹಾಲಿ ಅಧ್ಯಕ್ಷರು ಸಿದ್ಧಸಿರಿ ಮಲ್ಟಿಸ್ಟೇಟ್ ಕೋ–ಲಿ., ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕಿರಣ್ ಹೋಟಗಿ ರವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಎಂ. ಎಸ್. ಕರಡಿ, ಕೆ.ಬಿ.ಪಾಟೀಲ್, ವಿ.ಜಿ.ಇನಾಮದಾರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ್. ಎಸ್. ಉಪಸ್ಥಿತರಿದ್ದರು.ಕಾರ್ಯಕ್ರಮದಲ್ಲಿ ನಿರ್ದೇಶಕರ ಮತ್ತು ಸದ್ಯಸರ ಜವಾಬ್ದಾರಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಶ್ರೀ ಬಸವರಾಜ ಎಸ್ ಇವರು ಮಾಹಿತಿ ನೀಡಿದರು. ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದ್ಯಸರು, ಸಾಮಾನ್ಯ ಸದಸ್ಯರು, ಸಿಬ್ಬಂದಿ ವರ್ಗದವರು ಸಭೆಯಲ್ಲಿ ಭಾಗವಹಿಸಿದ್ದರು

## ದಶಮಾನೋತ್ಸವ ಕಾರ್ಯಕ್ರಮ




**ಕೊಪ್ಪಳ** : ದಿನಾಂಕ 20.09.2026 ರಂದು ಗಂಗಾ ಯಮುನಾ ಸೌಹಾರ್ದ ಸಹಕಾರಿ ಸಂಘ ನಿ., ಕೊಪ್ಪಳ ಇದರ ದಶಮಾನೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ನ್ಯಾಯಮೂರ್ತಿ ವಿ.ಶ್ರೀಶಾನಂದ ಇವರು ನೆರವೇರಿಸಿದರು.

ಕಾರ್ಯಕ್ರಮದ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ದಿವ್ಯ ಸಾನಿಧ್ಯ. ಪೂಜ್ಯ ಶ್ರೀ ಮ.ನಿ.ಪ್ರ.ಜ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹಾಗೂ ಪರಮ ಪೂಜ್ಯ ಶ್ರೀ ಸಿದ್ದಲಿಂಗ ದೇವರು, ಶ್ರೀ ಖಾಸ್ಗತೇಶ್ವರ ವಿರಕ್ತಮಠ, ತಾಳಿಕೋಟಿ ವಹಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಜಶೇಖರ ಹಿಟ್ನಾಳ ಮಾನ್ಯ ಲೋಕಸಭಾ ಸದಸ್ಯರು, ಕೊಪ್ಪಳ ಹಾಗೂ ಗೌರವಾನ್ವಿತ ಕೊಪ್ಪಳ ಜಿಲ್ಲಾ ನ್ಯಾಯಾಧೀಶರು, ಶ್ರೀ ರಾಘವೇಂದ್ರ ಹಿಟ್ನಾಳ ಅಧ್ಯಕ್ಷರು, ರಾ.ಬ.ಕೊ.ವಿ ಹಾ.ಉ ಒಕ್ಕೂಟ & ಮಾನ್ಯ ಶಾಸಕರು ಮತ್ತು ಶ್ರೀ ರಮೇಶ ವೈದ್ಯ, ರಾಷ್ಟ್ರೀಯ ಸಂರಕ್ಷರು, ಸಹಕಾರ ಭಾರತಿ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು, ಶ್ರೀ ಮಹೇಶ ಮಾಶಾಳ, ಮಾನವ ಮನಸ್ಥಿತಿ ತರಬೇತುದಾರರು, ಮಾಜಿ ಶಾಸಕರಾದ ಅಮರೇಗೌಡ ಬಯ್ಯಾಪುರ, ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಸಂಗಣ್ಣ ಕರಡಿರವರು, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠರವರು, ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ರಮೇಶ ಗಣಪತಿ ಬಗಲಿ, ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರು ಉಪಸ್ಥಿತರಿದ್ದರು

## ಉದ್ಘಾಟನೆ



**ದಕ್ಷಿಣ ಕನ್ನಡ** : ದಿನಾಂಕ 19.09.2026 ರಂದು ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ಸಂಘ ನಿ., ಕಛೇರಿಯ ಸ್ವಂತ ಕಟ್ಟಡ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ವೇದವ್ಯಾಸ ಕಾಮತ್ ರವರು ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರದ ಶ್ರೀಮತಿ ಭಾರತಿ ಜಿ. ಭಟ್ ರವರು ವಹಿಸಿದ್ದರು, ದೀಪ ಪ್ರಜ್ವಲನೆಯನ್ನು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರದ ಶ್ರೀ ಎಸ್. ಆರ್. ಸತೀಶ್ಚಂದ್ರ ರವರು ನೆರವೇರಿಸಿದರು, ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಮಾನ್ಯ ಅಧ್ಯಕ್ಷರದ ಶ್ರೀ ಭಾಸ್ಕರ್ ದೇವಸ್ಯ, ಮಂಗಳೂರು ಮಹಾನಗರ ಪಾಲಿಕೆಯ ಮಾನ್ಯ ಕಾರ್ಪೋರೇಟರ್ ಶ್ರೀಮತಿ ಶೋಭಾ ಪೂಜಾರಿ, ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ, ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಂದನ್ ಬಿ.ಎನ್. ರವರು ಉಪಸ್ಥಿತರಿದ್ದರು.



**ಹಾಸನ** : ಚನ್ನರಾಯಪಟ್ಟಣದಲ್ಲಿರುವ ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಸಂಘದ ಕೋಟೆ ರಸ್ತೆಯಲ್ಲಿರುವ ಸ್ವಂತ ನಿವೇಶನ ಕಟ್ಟಡದ ಶಂಕು ಸ್ಥಾಪನೆಯನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಸನ ಮತ್ತು ಕೊಡಗು ಜಿಲ್ಲೆ ಕಾರ್ಯದರ್ಶಿಗಳಾದ ಪರಮಪೂಜ್ಯ ಶ್ರೀ ಶ್ರೀ ಶಂಭನಾಥ ಸ್ವಾಮೀಜಿಯವರ ಪಾವನ ಸಾನಿಧ್ಯದಲ್ಲಿ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕರಾದ ಬಾಲಕೃಷ್ಣರವರು ಮಾಜಿ ವಿಧಾನ ಪರಿಷತ್ ಸದಸ್ಯರಾದ ಗೋಪಾಲಸ್ವಾಮಿ, ಪುಟ್ಟೇಗೌಡರು ಚಿದಾನಂದರವರು ಮತ್ತು ಸಂಘದ ಅಧ್ಯಕ್ಷರಾದ ಜೆ ಎನ್ ಮಧುಸೂದನವರು ಹಾಗೂ ಎಲ್ಲ ಗೌರವಾನ್ವಿತ ಕಾರ್ಯದರ್ಶಿಗಳು ಮತ್ತು ಸದಸ್ಯರುಗಳು ಭಾಗವಹಿಸಿದ್ದರು.



**ಕಲಬುರಗಿ :** ದಿನಾಂಕ 20.09.2026ರಂದು ಲಕ್ಷ್ಮಿ ವಿಕಾಸ ಸೌಹಾರ್ದ ಸಹಕಾರಿ ಸಂಘ ನಿಯಮಿತ ತಡಕಲ ತಾ. ಆಳಂದ ಜಿ. ಕಲಬುರಗಿ ಸಹಕಾರಿಯ 25ನೇ ವರ್ಷದ ರಜತ ಮಹೋತ್ಸವದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು. ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್ ರವರು ನೆರವೇರಿಸಿದರು. ದಿವ್ಯ ಸಾನಿಧ್ಯ ವನ್ನು ಶ್ರೀ ಷಟಸ್ಥಲ ಬ್ರಹ್ಮ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು ವಹಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀಮತಿ ಶೈಲಜ ತಪಲಿ ಹಾಗೂ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ಉಪಸ್ಥಿತರಿದ್ದರು. ಹಾಗೂ ಕಾರ್ಯಕ್ರಮದ ಅತಿಥಿಗಳಾಗಿ ಸದರಿ ಸಂಸ್ಥೆಯ ಸಂಸ್ಥಾಪಕರಾದ ಮಾನ್ಯ ಶ್ರೀ ಶಾಂತಿನಾಥ ಪಂಡಿತ, ಕಲಬುರಗಿ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಶಿವಶರಣಪ್ಪ ಕರೋಟಿ, ಬೀದರ ಜಿಲ್ಲೆಯ ಒಕ್ಕೂಟದ ನಿರ್ದೇಶಕರಾದ ಶ್ರೀ ಸಂಜೀವಕುಮಾರ್ ಬಿ ಸಜ್ಜನ, ಕಲಬುರಗಿ ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ, ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ ಕೋಡ್ಲೆ ಮತ್ತು ಆಡಳಿತ ಮಂಡಳಿ ನಿರ್ದೇಶಕರು ಭಾಗವಹಿಸಿದರು.



**ಚಿತ್ರದುರ್ಗ :** ದಿನಾಂಕ 22.09.2026ರಂದು ಶ್ರೀ ಕನ್ಯಕ ಸೌಹಾರ್ದ ಸಹಕಾರಿ ಸಂಘ ನಿ, ಹಿರಿಯೂರು ಚಿತ್ರದುರ್ಗ ಇದರ ರಜತ ಮಹೋತ್ಸವ ಕಾರ್ಯಕ್ರಮವು ತುಳಸಿ ಕಲ್ಯಾಣ ಮಂಟಪ, ಹಿರಿಯೂರು ಇಲ್ಲಿ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿ ಸಹಕಾರಿಯು ರಜತ ಮಹೋತ್ಸವವನ್ನು ಆಚರಿಸುತ್ತಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿ ಸಹಕಾರಿಯ ಆಡಳಿತ ಮಂಡಳಿಯ ಜವಾಬ್ದಾರಿ ಮತ್ತು ಕರ್ತವ್ಯದ ಬಗ್ಗೆ ಅರಿವನ್ನು ಮೂಡಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ತಿಪ್ಪೇಸ್ವಾಮಿ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು, ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕೂಟದ ಅಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ರವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಭಾಗವಹಿಸಿದ್ದರು



**ಉತ್ತರ ಕನ್ನಡ :** ದಿನಾಂಕ 05.09.2026 ರಂದು ನೂತನವಾಗಿ ನೋಂದಣಿಗೊಂಡ ಶ್ರೀ ರಸ್ತು ಸೌಹಾರ್ದ ಸಹಕಾರಿ, ಶಿರಸಿ ಸಂಘದ ಉದ್ಘಾಟನೆಯನ್ನು ಶಿರಸಿ ಸಿದ್ದಾಪುರ ಕ್ಷೇತ್ರದ ಶಾಸಕರಾದ ಶ್ರೀ ಭೀಮಣ್ಣ ನಾಯ್ಕ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ರವರು ಹಾಗೂ ರವರು ನೆರವೇರಿಸಿ ಸಹಕಾರಿಗೆ ಶುಭ ಹಾರೈಸಿದರು.



**ಬಾಗಲಕೋಟ:** ದಿನಾಂಕ 20.09.2026 ರಂದು ಶ್ರೀ ಶಿವಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ , ಬಾಗಲಕೋಟ ಇದರ ಪ್ರಧಾನ ಕಚೇರಿಯ ನೂತನ ಕಟ್ಟಡ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್ ರವರು ಹಾಗೂ ಬಿ. ಟಿ. ಡಿ. ಎ ಅಧ್ಯಕ್ಷರಾದ ಶ್ರೀ ಪ್ರಕಾಶ್ ತಪಶೆಟ್ಟಿ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ ಎಂ.ಎಸ್. ದಡ್ಡೆನ್ನವರ ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಹಾವೇರಿ :** ದಿನಾಂಕ 20.09.2026 ರಂದು ದೈವಜ್ಞ ಸುವರ್ಣ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಅಕ್ಕಿಆಲೂರು ಇದರ 10ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮೋಹನ್ ರಾಯ್ಕರ್ ವಹಿಸಿದ್ದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅತಿಥಿಗಳಾಗಿ ಶ್ರೀಮತಿ ರಮ್ಯಾ ಗಿರಿಯಾಪುರ್ ಜಿ ಎಸ್ ಟಿ, ಅಸಿಸ್ಟೆಂಟ್ ಕಮಿಷನರ್, ಹುಬ್ಬಳ್ಳಿ ಇವರು ಉಪಸ್ಥಿತರಿದ್ದರು. ಈ ಸಂಧರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಗೂ 120 ಸಹಕಾರಿ ಸದಸ್ಯರು ಹಾಜರಿದ್ದರು.



**ಧಾರವಾಡ :** ದಿನಾಂಕ 24.09.2025 ರಂದು ನಿವೃತ್ತ ನೌಕರರ ಸೌಹಾರ್ದ ಸಹಕಾರಿ ಸಂಘದ ಮೂರನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಅವರು ಭಾಗವಹಿಸಿ, ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## 79ನೇ ಕಲ್ಯಾಣ ಕರ್ನಾಟಕ ಉತ್ಸವ



**ಕಲಬುರಗಿ :** ದಿನಾಂಕ. 17–09–2026ರಂದು ಕಲಬುರಗಿ ಪ್ರಾಂತಿಯ ಕಛೇರಿಯಲ್ಲಿ 79ನೇ ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ಧ್ವಜರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಹಾಗೂ ಪ್ರಾಂತಿಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ಮತ್ತು ಎಲ್ಲ ಸಿಬ್ಬಂದಿಯವರು ಉಪಸ್ಥಿತರಿದ್ದರು.



**ಬೀದರ :** ದಿನಾಂಕ 17.09.2026 ರಂದು ಬೀದರ ಜಿಲ್ಲಾ ಸಂಪರ್ಕ ಕಛೇರಿ ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ 79ನೇ ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರರವರು ಧ್ವಜರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಸದಸ್ಯರು ಮತ್ತು ಬೀದರ ಜಿಲ್ಲಾ ಸಂಪರ್ಕ ಕಛೇರಿ ಮತ್ತು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಆಡಳಿತ ಮಂಡಳಿ ಸಭೆ

**ತುಮಕೂರು :** ದಿನಾಂಕ 31.08.2026ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ, ತುಮಕೂರು ಇದರ ಆಡಳಿತ ಮಂಡಲಿ ಸಭೆಯು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ಇವರ ಅಧ್ಯಕ್ಷತೆಯಲ್ಲಿ ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಜರುಗಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಮತ್ತು ಕಿರಿಯ ಸಹಾಯಕರಾದ ಶ್ರೀ ಗೋವಿಂದ ರವರು ಭಾಗವಹಿಸಿದ್ದರು.

# ಗಾಂಧೀಜಿಯವರ ಸಹಕಾರ ಚಳುವಳಿಯ ಕಲ್ಪನೆ - ದೇಶದಲ್ಲಿ ಸಾಕಾರ

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಹಿರಿಯ ಅಧಿಕಾರಿ, ಶಾಸನಾತ್ಮಕ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

"ನಾನು ಒಬ್ಬನ ಕಲ್ಯಾಣವನ್ನು ಬಯಸುವುದಿಲ್ಲ; ಎಲ್ಲರ ಕಲ್ಯಾಣದಲ್ಲಿಯೇ ವ್ಯಕ್ತಿಯ ಕಲ್ಯಾಣವಿದೆ" – ಈ ಮನೋಭಾವವೇ ಮಹಾತ್ಮ ಗಾಂಧೀಜಿಯವರ ಆರ್ಥಿಕ ಮತ್ತು ಸಾಮಾಜಿಕ ಚಿಂತನೆಯ ಹೃದಯವಾಗಿತ್ತು. ಗಾಂಧೀಜಿಯವರ ದೃಷ್ಟಿಯಲ್ಲಿ ಸ್ವಾತಂತ್ರ್ಯವೆಂದರೆ ಕೇವಲ ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿ ಪಡೆಯುವುದಲ್ಲ; ಪ್ರತಿಯೊಬ್ಬ ಗ್ರಾಮಸ್ಥನಿಗೂ ಗೌರವಯುತ ಜೀವನ, ಉದ್ಯೋಗ, ಸ್ವಾವಲಂಬನೆ, ಸಮಾನ ಅವಕಾಶ ಮತ್ತು ನಿರ್ಧಾರ ತೆಗೆದುಕೊಳ್ಳುವ ಹಕ್ಕು ದೊರೆಯುವಂತಹ ಸಮಾಜ ನಿರ್ಮಾಣವೂ ಆಗಿತ್ತು.

ಈ ಹಿನ್ನೆಲೆಯಲ್ಲಿ ಸಹಕಾರ ಚಳುವಳಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯ, ಸ್ವದೇಶಿ, ಸ್ವಾವಲಂಬನೆ, ವಿಕೇಂದ್ರೀಕರಣ, ಶ್ರಮದ ಗೌರವ ಮತ್ತು ಸರ್ವೋದಯದ ಕಲ್ಪನೆಗಳೊಂದಿಗೆ ಆಳವಾದ ಸಂಬಂಧ ಹೊಂದಿದೆ.

### ಸಹಕಾರದ ಕುರಿತು ಗಾಂಧೀಜಿಯವರ ಕಲ್ಪನೆ :

ಗಾಂಧೀಜಿಯವರ ದೃಷ್ಟಿಯಲ್ಲಿ ಸಹಕಾರ ಎಂದರೆ ಕೇವಲ ಸದಸ್ಯರನ್ನು ಸೇರಿಸಿ ಒಂದು ಸಂಘ ಅಥವಾ ಸಂಸ್ಥೆ ಸ್ಥಾಪಿಸುವುದಲ್ಲ. ಅದು "ನಾನು" ಎನ್ನುವುದರಿಂದ "ನಾವು" ಎನ್ನುವ ಕಡೆಗೆ ಸಾಗುವ ಸಾಮಾಜಿಕ ಮನೋಭಾವ.ಒಬ್ಬ ರೈತನಿಗೆ ಬೀಜ ಬೇಕು, ಮತ್ತೊಬ್ಬನಿಗೆ ಸಾಲ ಬೇಕು, ಇನ್ನೊಬ್ಬನಿಗೆ ಮಾರುಕಟ್ಟೆ ಬೇಕು, ಮತ್ತೊಬ್ಬನಿಗೆ ಉದ್ಯೋಗ ಬೇಕು. ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಹೋರಾಡುವುದಕ್ಕಿಂತ ತಮ್ಮ ಸಂಪನ್ಮೂಲ, ಶ್ರಮ, ಜ್ಞಾನ ಮತ್ತು ಬಂಡವಾಳವನ್ನು ಒಟ್ಟುಗೂಡಿಸಿ ಪರಸ್ಪರ ಸಹಾಯ ಮಾಡಿಕೊಂಡರೆ ಎಲ್ಲರ ಬದುಕು ಉತ್ತಮವಾಗುತ್ತದೆ ಎಂಬುದು ಅವರ ಚಿಂತನೆ.

ಗಾಂಧೀಜಿಯವರು ಕೃಷಿಯಲ್ಲಿ ಸಹಕಾರದ ಮಹತ್ವವನ್ನು ವಿಶೇಷವಾಗಿ ಒತ್ತಿಹೇಳಿದ್ದರು. ಭೂಮಿ, ಕೃಷಿ ಉಪಕರಣಗಳು, ಬೀಜ, ಪಶುಸಂಪತ್ತು ಮತ್ತು ಬಂಡವಾಳವನ್ನು ಸಹಕಾರದ ಆಧಾರದ ಮೇಲೆ ಬಳಸುವುದರಿಂದ ಶ್ರಮ ಮತ್ತು ವೆಚ್ಚ ಉಳಿತಾಯವಾಗಬಹುದು, ಗ್ರಾಮಸ್ಥರು ಒಂದು ಕುಟುಂಬದಂತೆ ಕೆಲಸ ಮಾಡಿದಾಗ ಬಡತನ ಮತ್ತು ನಿರುದ್ಯೋಗ ಕಡಿಮೆಯಾಗಬಹುದು ಎಂದು ಅವರು ಪ್ರತಿಪಾದಿಸಿದ್ದರು. ಸಹಕಾರವು ಬಲವಂತದಿಂದಲ್ಲ, ಸ್ವಯಂಪ್ರೇರಣೆ ಮತ್ತು ಅಹಿಂಸೆಯ ಆಧಾರದ ಮೇಲೆನಡೆಯಬೇಕು ಎಂಬುದು ಅವರ ಪ್ರಮುಖ ನಿಲುವಾಗಿತ್ತು

**ಆದ್ದರಿಂದ ಗಾಂಧೀಜಿಯವರ ಸಹಕಾರದ ಮೂಲಮಂತ್ರಗಳನ್ನು ಹೀಗೆ ಗುರುತಿಸಬಹುದು:**

- ಸ್ವಯಂಪ್ರೇರಿತ ಭಾಗವಹಿಸುವಿಕೆ
- ಪರಸ್ಪರ ಸಹಾಯ
- ಸಮಾನತೆ
- ಪ್ರಜಾಸತ್ತಾತ್ಮಕ ನಿರ್ಧಾರ
- ಸ್ಥಳೀಯ ಸಂಪನ್ಮೂಲಗಳ ಬಳಕೆ
- ಶ್ರಮಕ್ಕೆ ಗೌರವ
- ಸ್ವಾವಲಂಬನೆ
- ಗ್ರಾಮೀಣ ಉದ್ಯೋಗ ಸೃಷ್ಟಿ
- ಲಾಭಕ್ಕಿಂತ ಮಾನವ ಕಲ್ಯಾಣಕ್ಕೆ ಆದ್ಯತೆ
- ಅಹಿಂಸೆ ಮತ್ತು ನೈತಿಕತೆ

ಇಂದಿನ ಅಂತರರಾಷ್ಟ್ರೀಯ ಸಹಕಾರಿ ತತ್ವಗಳಾದ ಸ್ವಯಂಪ್ರೇರಿತ ಸದಸ್ಯತ್ವ, ಪ್ರಜಾಸತ್ತಾತ್ಮಕ ನಿಯಂತ್ರಣ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ, ಸ್ವಾಯತ್ತತೆ, ಶಿಕ್ಷಣ, ಸಹಕಾರಿಗಳ ನಡುವಿನ ಸಹಕಾರ ಮತ್ತು ಸಮುದಾಯದ ಕಾಳಜಿಯೊಂದಿಗೆ ಈ ವಿಚಾರಗಳಿಗೆ ಗಮನಾರ್ಹ ಸಾಮ್ಯವಿದೆ.

### ಗ್ರಾಮ ಸ್ವರಾಜ್ಯ ಮತ್ತು ಸಹಕಾರ

ಗಾಂಧೀಜಿಯವರ ಕನಸಿನ ಭಾರತವು ಕೇವಲ ದೊಡ್ಡ ನಗರಗಳು ಮತ್ತು ಬೃಹತ್ ಕೈಗಾರಿಕೆಗಳ ಭಾರತವಾಗಿರಲಿಲ್ಲ. ಸ್ವಾವಲಂಬಿ ಗ್ರಾಮಗಳ ಭಾರತ ಅವರ ಕನಸಾಗಿತ್ತು. ಅವರ ಗ್ರಾಮಸ್ವರಾಜ್ಯದಲ್ಲಿ ಗ್ರಾಮವೇ ಆರ್ಥಿಕ ಮತ್ತು ಸಾಮಾಜಿಕ ಜೀವನದ ಪ್ರಮುಖ ಘಟಕ. ಗ್ರಾಮ ತನ್ನ ಆಹಾರ, ಬಟ್ಟೆ ಮತ್ತು ಸಾಧ್ಯವಾದಷ್ಟು ತನ್ನ ಅಗತ್ಯ ವಸ್ತುಗಳನ್ನು ತಾನೇ ಉತ್ಪಾದಿಸಬೇಕು. ಕೃಷಿಯ ಜೊತೆಗೆ ನೂಲಿನ ಕೆಲಸ, ಕೈಮಗ್ಗ, ಕುಂಬಾರಿಕೆ, ಎಣ್ಣೆ ಉತ್ಪಾದನೆ, ಸಣ್ಣ ಕೈಗಾರಿಕೆಗಳು ಮುಂತಾದ ಗ್ರಾಮೋದ್ಯಮಗಳು ಬೆಳೆಯಬೇಕು. ಸಾಧ್ಯವಾದಷ್ಟು ಚಟುವಟಿಕೆಗಳು ಸಹಕಾರದ ಆಧಾರದ ಮೇಲೆ ನಡೆಯಬೇಕು ಎಂದು ಅವರು ಬಯಸಿದ್ದರು.

**ಹೀಗಾಗಿ ಗಾಂಧೀಜಿಯವರ ದೃಷ್ಟಿಯಲ್ಲಿ :** ಗ್ರಾಮ ಸ್ವರಾಜ್ಯ ಸ್ವಾವಲಂಬನೆ ಸ್ಥಳೀಯ ಉತ್ಪಾದನೆ ಸಹಕಾರ ಉದ್ಯೋಗ ಆರ್ಥಿಕ ಸಮಾನತೆ ಸಾಮಾಜಿಕ ಸೌಹಾರ್ದ ಎಂಬ ಕೊಂಡಿ ನಿರ್ಮಾಣವಾಗುತ್ತದೆ.

**ಖಾದಿ ಮತ್ತು ಗ್ರಾಮೋದ್ಯಮದಲ್ಲಿಯೂ ಸಹಕಾರ :** ಗಾಂಧೀಜಿಯವರ ಸಹಕಾರದ ಕಲ್ಪನೆ ಕೇವಲ ಕೃಷಿಗೆ ಸೀಮಿತವಾಗಿರಲಿಲ್ಲ. ಖಾದಿ ಮತ್ತು ಗ್ರಾಮೋದ್ಯಮಗಳ ಮೂಲಕ ಗ್ರಾಮೀಣ ಜನರಿಗೆ ಹೆಚ್ಚುವರಿ ಆದಾಯ ಮತ್ತು ಉದ್ಯೋಗ ಒದಗಿಸುವುದು ಅವರ ಪ್ರಮುಖ ಉದ್ದೇಶವಾಗಿತ್ತು.

ಕೃಷಿ ಋತುಮಾನಕ್ಕೆ ಒಳಪಟ್ಟಿರುವುದರಿಂದ ರೈತರಿಗೆ ವರ್ಷಪೂರ್ತಿ ಉದ್ಯೋಗ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ನೂಲುವುದು, ನೇಯುವುದು ಮತ್ತು ಇತರ ಗ್ರಾಮೋದ್ಯಮಗಳು ಹೆಚ್ಚುವರಿ ಉದ್ಯೋಗ ನೀಡಬಹುದು ಎಂಬುದು ಅವರ ಚಿಂತನೆಯಾಗಿತ್ತು. ಗ್ರಾಮೀಣ ಉತ್ಪಾದನೆಯನ್ನು ಸಂಘಟಿಸಿ ಮಾರುಕಟ್ಟೆಗೆ ಸಂಪರ್ಕಿಸುವಲ್ಲಿ ಸಹಕಾರಿ

ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬೇಕು ಎಂದು ಅವರು ಬಯಸಿದ್ದರುಗಾಂಧೀಜಿಯವರ ಕಾಲದಲ್ಲಿಯೇ ಗ್ರಾಮೋದ್ಯಮದ ಸಂಘಟಿತ ಪ್ರಯತ್ನಗಳು ಸಾವಿರಾರು ಗ್ರಾಮಗಳಿಗೆ ಉದ್ಯೋಗದ ಅವಕಾಶಗಳನ್ನು ತಲುಪಿಸಿದ್ದವು ಎಂಬ ದಾಖಲೆಗಳೂ ದೊರೆಯುತ್ತವೆ.

ಗಾಂಧೀಜಿಯವರ ಸಹಕಾರದ ಕನಸು ಸಾಕಾರಗೊಂಡಿದೆಯೇ? ಎಂದು ವಿಮರ್ಶೆ ಮಾಡಿದಾಗ "ಸಂಪೂರ್ಣವಾಗಿ ಸಾಕಾರಗೊಂಡಿದೆ" ಅಥವಾ "ಸಂಪೂರ್ಣವಾಗಿ ವಿಫಲವಾಗಿದೆ" ಎಂದು ಒಂದೇ ವಾಕ್ಯದಲ್ಲಿ ಉತ್ತರಿಸುವುದು ಕಷ್ಟವಾಗುತ್ತದೆ, ವಾಸ್ತವವಾಗಿ ನೋಡಿದರೆ, ಗಾಂಧೀಜಿ ಯವರ ಸಹಕಾರದ ಕಲ್ಪನೆಯ ಕೆಲವು ಭಾಗಗಳು ಬಹಳ ದೊಡ್ಡ ಮಟ್ಟದಲ್ಲಿ ಸಾಕಾರಗೊಂಡಿವೆ ಕೆಲವು ಭಾಗಗಳು ಅಪೂರ್ಣವಾಗಿವೆ, ಇನ್ನೂ ಕೆಲವು ಕ್ಷೇತ್ರಗಳಲ್ಲಿ ಅವರ ಮೂಲ ಆಶಯದಿಂದ ನಾವು ದೂರ ಹೋಗಿದ್ದೇವೆ.

### ಸಾಕಾರಗೊಂಡಿರುವ ಪ್ರಮುಖ ಕ್ಷೇತ್ರಗಳು

ಭಾರತದಲ್ಲಿ ಸಹಕಾರವು ಕೃಷಿ ಸಾಲ, ಹಾಲು ಉತ್ಪಾದನೆ, ಸಕ್ಕರೆ, ಬ್ಯಾಂಕಿಂಗ್, ಮಾರುಕಟ್ಟೆ, ಗೃಹ ನಿರ್ಮಾಣ, ಮೀನುಗಾರಿಕೆ, ಕೈಮಗ್ಗ ಸೇರಿದಂತೆ ಹಲವು ಕ್ಷೇತ್ರಗಳಿಗೆ ವಿಸ್ತರಿಸಿದೆ. ಸ್ವಾತಂತ್ರ್ಯಾನಂತರ ಸಹಕಾರವು ವಿಕೇಂದ್ರೀಕೃತ ಅಭಿವೃದ್ಧಿ ಮತ್ತು ಗ್ರಾಮೀಣ ಆರ್ಥಿಕತೆಗೆ ಪ್ರಮುಖ ಸಾಧನವಾಗಿ ಬೆಳೆದಿದೆ. NCDC ಮತ್ತು NABARD ಮುಂತಾದ ಸಂಸ್ಥೆಗಳು ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಸ್ಥಾತ್ಮಕ ಬೆಂಬಲ ನೀಡಿವೆ. ಇದರಿಂದಾಗಿ ಇಫ್ಕೋ, ಅಮೂಲ್, ಕೆಎಂಎಫ್ ಹಾಗೂ ಕ್ಯಾಂಪ್ಕೋದಂತಹ ಸಹಕಾರಿಗಳು ಯಶಸ್ವಿಯಾಗಿ ಕಾರ್ಯನಿವಹಿಸಲಾಗುತ್ತಿವೆ.

ಭಾರತೀಯ ಸಂವಿಧಾನದ 97ನೇ ತಿದ್ದುಪಡಿಯ ನಂತರ Article 43B ಮೂಲಕ ಸ್ವಯಂಪ್ರೇರಿತ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ನಿರ್ವಹಣೆಯನ್ನು ಉತ್ತೇಜಿಸುವುದು ರಾಜ್ಯದ ಕರ್ತವ್ಯಗಳಲ್ಲಿ ಒಂದಾಗಿ ಗುರುತಿಸಲಾಯಿತು

2021ರಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪನೆಯಾದ ನಂತರ ಸಹಕಾರಿ ಕ್ಷೇತ್ರಕ್ಕೆ ಕೇಂದ್ರ ಮಟ್ಟದಲ್ಲಿ ಪ್ರತ್ಯೇಕ ಆಡಳಿತಾತ್ಮಕ ಮತ್ತು ನೀತಿ ಚೌಕಟ್ಟು ದೊರಕಿದೆ. 2025ರ ರಾಷ್ಟ್ರೀಯ ಸಹಕಾರ ನೀತಿಯೂ ರೈತರು, ಮಹಿಳೆಯರು ಮತ್ತು ಗ್ರಾಮೀಣ ಅಭಿವೃದ್ಧಿಯನ್ನು ಸಹಕಾರಿ ಕ್ಷೇತ್ರದ ಪ್ರಮುಖ ಕೇಂದ್ರಗಳಾಗಿ ಗುರುತಿಸಿದೆ. ಅ ಇವೆಲ್ಲವೂ ಸಹಕಾರದ ಸಂಸ್ಥಾತ್ಮಕ ಬೆಳವಣಿಗೆಯನ್ನು ಸೂಚಿಸುತ್ತವೆ.

ಸಂಸ್ಥೆಗಳ ಸಂಖ್ಯೆ ಹೆಚ್ಚಾದರೆ ಮಾತ್ರ ಗಾಂಧೀಜಿಯವರ ಸಹಕಾರದ ಕನಸು ಸಾಕಾರವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಸಹಕಾರದ ಆತ್ಮ ಸಂಸ್ಥೆಯೊಳಗೆ ಜೀವಂತವಾಗಿದೆಯೇ ಎಂಬುದು ಮುಖ್ಯ. ಆದ್ದರಿಂದ ಕೆಲವು ಪ್ರಮುಖ ಸವಾಲುಗಳು ಹೀಗಿವೆ:

1. **ರಾಜಕೀಯ ಹಸ್ತಕ್ಷೇಪ :** ಕೆಲವು ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ಹಿತಾಸಕ್ತಿಗಿಂತ ರಾಜಕೀಯ ಅಥವಾ ಗುಂಪು ಹಿತಾಸಕ್ತಿಗಳು ಪ್ರಭಾವ ಬೀರುವ ಸಾಧ್ಯತೆ ಇದೆ. ಇದರಿಂದ ಸದಸ್ಯರ ಸ್ವಾಯತ್ತ ನಿರ್ಧಾರ ಸಾಮರ್ಥ್ಯ ಕುಗ್ಗುತ್ತಿದೆ.
2. **ಪ್ರಜಾಸತ್ತಾತ್ಮಕ ನಿಯಂತ್ರಣದ ದುರ್ಬಲತೆ ;** ಸಹಕಾರಿಯ ಮಾಲೀಕರು ಅದರ ಸದಸ್ಯರೇ. ಆದರೆ ಸದಸ್ಯರು ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸದಕಾರಣನಿರ್ಧಾರ ಪ್ರಕ್ರಿಯೆಯಿಂದ ದೂರ ಉಳಿದರೆ ಸಹಕಾರಿ ಸಂಸ್ಥೆ ಕೆಲವೇ ವ್ಯಕ್ತಿಗಳ ನಿಯಂತ್ರಣಕ್ಕೆ ಹೋಗುವ ಅಪಾಯವಿದೆ.
3. **ಪಾರದರ್ಶಕತೆಯ ಕೊರತೆ ;** ಲೆಕ್ಕಪತ್ರ, ಆಡಳಿತ, ಚುನಾವಣೆ, ಸಾಲ ವಿತರಣೆ ಮತ್ತು ನಿರ್ಧಾರ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಸದಸ್ಯರ ವಿಶ್ವಾಸ ಕುಗ್ಗುತ್ತದೆ.
4. **ವೃತ್ತಿಪರ ನಿರ್ವಹಣೆಯ ಕೊರತೆ ;** ಇಂದಿನ ಸ್ಪರ್ಧಾತ್ಮಕ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳು ಉತ್ತಮ ಆಡಳಿತ, ತಂತ್ರಜ್ಞಾನ, ಹಣಕಾಸು ನಿರ್ವಹಣೆ, ಮಾರುಕಟ್ಟೆ ಜ್ಞಾನ ಮತ್ತು ವೃತ್ತಿಪರ ನಿರ್ವಹಣೆಯನ್ನು ಹೊಂದಿರಬೇಕು.
5. **ಸದಸ್ಯರಲ್ಲಿ ಸಹಕಾರದ ಮನೋಭಾವದ ಕೊರತೆ ;** "ಸಹಕಾರಿ ಸಂಸ್ಥೆ ಸರ್ಕಾರದ ಸಂಸ್ಥೆ" ಎಂಬ ತಪ್ಪು ಮನೋಭಾವ ಬೆಳೆದರೆ ಸಹಕಾರದ ಮೂಲತತ್ವವೇ ದುರ್ಬಲವಾಗುತ್ತದೆ. ಸಹಕಾರಿ ಸಂಸ್ಥೆ ಎಂದರೆಸದಸ್ಯರ ಸ್ವಂತ ಸಂಸ್ಥೆಎಂಬ ಅರಿವು ಬಲವಾಗಬೇಕು.
6. **ಸಣ್ಣ ರೈತರು ಮತ್ತು ದುರ್ಬಲ ವರ್ಗಗಳ ಭಾಗವಹಿಸುವಿಕೆ ;** ಸಹಕಾರದ ಉದ್ದೇಶವೇ ದುರ್ಬಲರನ್ನು ಒಟ್ಟುಗೂಡಿಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದು. ಆದರೆ ದೊಡ್ಡ ಸದಸ್ಯರು ಅಥವಾ ಪ್ರಭಾವಶಾಲಿ ಗುಂಪುಗಳು ಹೆಚ್ಚಿನ ಪ್ರಭಾವ ಪಡೆದರೆ ಮೂಲ ಉದ್ದೇಶಕ್ಕೆ ಧಕ್ಕೆಯಾಗಬಹುದು.
7. **ಯುವಜನರ ದೂರಾವಸ್ಥೆ ;** ಡಿಜಿಟಲ್ ಆರ್ಥಿಕತೆ ಮತ್ತು ಸ್ಟಾರ್ಟ್‌ಅಪ್ ಸಂಸ್ಕೃತಿಯ ನಡುವೆ ಯುವಜನರನ್ನು ಸಹಕಾರಿ ಕ್ಷೇತ್ರಕ್ಕೆ ಆಕರ್ಷಿಸುವುದು ಒಂದು ದೊಡ್ಡ ಸವಾಲಾಗಿದೆ.
8. **ಮಹಿಳೆಯರ ಹಿಂಜರಿಕೆ ;** ದೇಶದ ಅರ್ಧದಷ್ಟು ಮಹಿಳೆ ಇದ್ದರು ಸಹ ಇವರು ಹೈನುಗಾರಿಕೆ ಸಂಭಧಿಸಿದ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರೆ ಹೊರತು ಇತರೆ ಸಹಕಾರ ಕ್ಷೇತ್ರದಲ್ಲಿ ಬೆರಳಣಿಕೆಯಷ್ಟು ಮಾತ್ರ ಕಾಣಿಸುತ್ತಾರೆ.

### ಗಾಂಧೀಜಿಯವರ ಕನಸಿಗೆ ಪೂರಕವಾದ ಅಂಶಗಳು

ಇಂದಿನ ಭಾರತದಲ್ಲಿ ಗಾಂಧೀಜಿಯವರ ಸಹಕಾರದ ಕಲ್ಪನೆಯನ್ನು ಹೊಸ ರೂಪದಲ್ಲಿ ಮುಂದುವರಿಸಲು ಹಲವು ಅವಕಾಶಗಳಿವೆ.

**ಡಿಜಿಟಲ್ ಸಹಕಾರ :** ಮೊಬೈಲ್, ಇಂಟರ್ನೆಟ್, ಡಿಜಿಟಲ್ ಪಾವತಿ, ಇ-ಕಾಮರ್ಸ್ ಮತ್ತು ಡಿಜಿಟಲ್ ಮಾರುಕಟ್ಟೆಗಳ ಮೂಲಕ ಸಣ್ಣ ರೈತರು ಮತ್ತು ಗ್ರಾಮೀಣ ಉತ್ಪಾದಕರನ್ನು ನೇರವಾಗಿ ಮಾರುಕಟ್ಟೆಗೆ ಸಂಪರ್ಕಿಸಬಹುದು.

**ರೈತ ಉತ್ಪಾದಕರ ಸಂಘಟನೆಗಳು :** ಸಣ್ಣ ರೈತರು ಒಬ್ಬೊಬ್ಬರಾಗಿ ಮಾರುಕಟ್ಟೆಗೆ ಹೋದರೆ ಅವರ ಮಾತುಕತೆ ಶಕ್ತಿ ಕಡಿಮೆಯಾಗಬಹುದು.

ಒಟ್ಟಾಗಿ ಉತ್ಪಾದನೆ, ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟ ಮಾಡಿದರೆ ಮೌಲ್ಯವರ್ಧನೆಗೆ ಅವಕಾಶ ಹೆಚ್ಚುತ್ತದೆ.

**ಮಹಿಳಾ ಸಹಕಾರ :** ಸ್ವಸಹಾಯ ಗುಂಪುಗಳು, ಹಾಲು ಉತ್ಪಾದನಾ ಸಹಕಾರಿಗಳು, ಕೈಮಗ್ಗ, ಆಹಾರ ಸಂಸ್ಕರಣೆ, ಗ್ರಾಮೀಣ ಉದ್ಯಮಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಾಂಧೀಜಿಯವರ ಸರ್ವೋದಯದ ಆಶಯಕ್ಕೆ ಬಲ ನೀಡಬಹುದು.

**ಯುವಕರ ಸಹಕಾರ :** ಯುವಕರು ತಂತ್ರಜ್ಞಾನ, ನಿರ್ವಹಣೆ ಮತ್ತು ಮಾರುಕಟ್ಟೆ ಜ್ಞಾನವನ್ನು ಸಹಕಾರಿ ಕ್ಷೇತ್ರಕ್ಕೆ ತಂದರೆ ಹಳೆಯ ಸಹಕಾರಿ ಮಾದರಿಗಳಿಗೆ ಹೊಸ ಚೈತನ್ಯ ದೊರೆಯಬಹುದು.

**ಸ್ಥಳೀಯ ಉತ್ಪಾದನೆ– ಸ್ಥಳೀಯ ಮಾರುಕಟ್ಟೆ**

"ಗ್ರಾಮದಲ್ಲಿ ಉತ್ಪಾದನೆ, ಗ್ರಾಮಸ್ಥರ ಸಹಕಾರ, ದೇಶೀಯ ಮಾರುಕಟ್ಟೆ" ಎಂಬ ಕಲ್ಪನೆಯನ್ನು ಆಧುನಿಕ ಬ್ರ್ಯಾಂಡಿಂಗ್ ಮತ್ತು ಇ–ಕಾಮರ್ಸ್‌ನೊಂದಿಗೆ ಜೋಡಿಸಬಹುದು.

**ಗಾಂಧೀಜಿಯವರ ಸಹಕಾರದ ಕನಸನ್ನು 21ನೇ ಶತಮಾನದಲ್ಲಿ ಸಾಕಾರಗೊಳಿಸಲು ಕೆಲವು ಪ್ರಮುಖ ಸಲಹೆಗಳು:**

1. ಸಹಕಾರದ ಕುರಿತು ಶಿಕ್ಷಣವನ್ನು ಶಾಲೆ ಕಾಲೇಜು ಮಟ್ಟದಿಂದಲೇ ನೀಡಬೇಕು.
2. ಪ್ರತಿ ಸಹಕಾರಿ ಸಂಸ್ಥೆಯಲ್ಲಿ ಪಾರದರ್ಶಕ ಲೆಕ್ಕಪತ್ರ ಮತ್ತು ಡಿಜಿಟಲ್ ಆಡಳಿತ ಇರಬೇಕು.
3. ಸದಸ್ಯರ ನಿಜವಾದ ಪ್ರಜಾಸತ್ತಾತ್ಮಕ ನಿಯಂತ್ರಣ ಖಚಿತಪಡಿಸಬೇಕು.
4. ರಾಜಕೀಯ ಮತ್ತು ವೈಯಕ್ತಿಕ ಹಿತಾಸಕ್ತಿಗಳಿಗಿಂತ ಸದಸ್ಯರ ಹಿತಕ್ಕೆ ಆದ್ಯತೆ ನೀಡಬೇಕು.
5. ಯುವಕರು ಮತ್ತು ಮಹಿಳೆಯರಿಗೆ ನಿರ್ಧಾರ ಪ್ರಕ್ರಿಯೆಯಲ್ಲಿ ಹೆಚ್ಚಿನ ಅವಕಾಶ ನೀಡಬೇಕು.
6. ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ನೇರ ಮಾರುಕಟ್ಟೆ ವ್ಯವಸ್ಥೆ ಬೆಳೆಸಬೇಕು.
7. ಸಹಕಾರಿ ಸಂಸ್ಥೆಗಳ ನಡುವೆ ಪರಸ್ಪರ ಸಹಕಾರ ಹೆಚ್ಚಿಸಬೇಕು.
8. ವೃತ್ತಿಪರ ನಿರ್ವಹಣೆ ಮತ್ತು ಆಧುನಿಕ ತಂತ್ರಜ್ಞಾನ ಅಳವಡಿಸಬೇಕು.
9. ಸಣ್ಣ ರೈತರು, ಕಾರ್ಮಿಕರು, ಕುಶಲಕರ್ಮಿಗಳು ಮತ್ತು ದುರ್ಬಲ ವರ್ಗಗಳನ್ನು ಸಹಕಾರದ ಕೇಂದ್ರಬಿಂದುವಾಗಿಸಬೇಕು.
10. ಸಹಕಾರವನ್ನು ಕೇವಲ ಸಾಲ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸೀಮಿತಗೊಳಿಸದೆ ಉತ್ಪಾದನೆ, ಸಂಸ್ಕರಣೆ, ಮಾರುಕಟ್ಟೆ, ಸೇವೆ ಮತ್ತು ಉದ್ಯೋಗದ ಕ್ಷೇತ್ರಗಳಿಗೆ ವಿಸ್ತರಿಸಬೇಕು.

ಒಂದು ಸಹಕಾರಿ ಸಂಸ್ಥೆ ದೊಡ್ಡ ಮೊತ್ತದ ವ್ಯವಹಾರ ಮಾಡುತ್ತಿದೆ ಎಂದ ಮಾತ್ರಕ್ಕೆ ಅದು ಗಾಂಧೀಜಿಯವರ ದೃಷ್ಟಿಯಲ್ಲಿ ಯಶಸ್ವಿ ಸಹಕಾ–ರಿಯಾಗುವುದಿಲ್ಲ. ಅದರ ಸದಸ್ಯನ ಜೀವನದಲ್ಲಿ ಬದಲಾವಣೆ ಬಂದಿದೆಯೇ,

ರೈತನಿಗೆ ನ್ಯಾಯಯುತ ಬೆಲೆ ಸಿಕ್ಕಿದೆಯೇ, ಯುವಕನಿಗೆ ಉದ್ಯೋಗ ಸಿಕ್ಕಿದೆಯೇಮಹಿಳೆಗೆ ಆರ್ಥಿಕ ಸ್ವಾವಲಂಬನೆ ಬಂದಿದೆಯೇ, ಗ್ರಾಮದ ಸಂಪತ್ತು ಗ್ರಾಮದಲ್ಲೇ ಉಳಿದಿದೆಯೇ, ದುರ್ಬಲ ಸದಸ್ಯನಿಗೂ ಸಮಾನ ಅವಕಾಶ ಸಿಕ್ಕಿದೆಯೇ ಎನ್ನುವುದರ ಆಧಾರದ ಮೇಲೆ ಅವಲಂಬಿತವಾಗಿದೆ.

ಪ್ರತಿಯೊಬ್ಬ ಸಹಕಾರಿ ಸದಸ್ಯನದು, ಪ್ರತಿಯೊಬ್ಬ ರೈತನದು, ಪ್ರತಿಯೊಬ್ಬ ಗ್ರಾಮಸ್ಥನದು, ಪ್ರತಿಯೊಬ್ಬ ಯುವಕ ಯುವತಿಯದು ಮತ್ತು ನಮ್ಮೆಲ್ಲರದು.

ಗಾಂಧೀಜಿಯವರ ಸತ್ಯ, ಅಹಿಂಸೆ, ಸ್ವಾವಲಂಬನೆ, ಸರ್ವೋದಯ ಮತ್ತು ಸಹಕಾರದ ಮೌಲ್ಯಗಳು ನಮ್ಮ ನಡೆ – ನುಡಿಯಲ್ಲಿ ಜೀವಂತವಾದಾಗಲೇ 157ನೇ ಗಾಂಧೀ ಜಯಂತಿಯ ಆಚರಣೆಗೆ ನಿಜವಾದ ಅರ್ಥ ದೊರೆಯುತ್ತದೆ.

"ಎಲ್ಲರಿಗಾಗಿ ನಾನು – ನನಗಾಗಿ ಎಲ್ಲರೂ; ಇದೇ ಸಹಕಾರದ ಆತ್ಮ, ಇದೇ ಗಾಂಧೀಜಿಯವರ ಕನಸಿನ ದಾರಿ."

## ಉದ್ಘಾಟನೆ



**ಕೊಪ್ಪಳ** : ದಿನಾಂಕ 23–09–2026 ರಂದು ಶ್ರೀ ಕರಿಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಹನುಮಸಾಗರ ಕುಷ್ಟಗಿ ನಗರದಲ್ಲಿ ನೂತನ ಶಾಖೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ಉದ್ಘಾಟನೆಯನ್ನು ನೆರವೇರಿಸಿದರು. ಸಹಕಾರಿಯ ಸದಸ್ಯರನ್ನು ಉದ್ದೇಶಿಸಿ ಸೌಹಾರ್ದ ಕಾಯ್ದೆಯ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿಶ್ವನಾಥ ಗುರಪ್ಪ ಕನ್ನೂರ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಚಂದಪ್ಪ ಎನ್ ಶಾಸ್ತ್ರಿ ಹಾಗೂ ಶಾಖೆಯ ಸಲಹಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಒಕ್ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಕೊಪ್ಪಳ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕೋಟೆಪ್ಪ ಕೋಗನೂರು ರವರು ಭಾಗವಹಿಸಿದರು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.

# ವಿಶ್ವಾಸಾರ್ಹ ಸಹಕಾರಿ ಬ್ರ್ಯಾಂಡ್‌ಗಳ ನಿರ್ಮಾಣ - ಭಾರತದ ಪ್ರಮುಖ ಸಹಕಾರಿ ಸಂಸ್ಥೆಗಳ ಅನುಭವಗಳಿಂದ ಕಲಿಯಬೇಕಾದ ಪಾಠಗಳು

ಮೂಲ : ಡಾ. ನಿವಿ ಶ್ರೀವಾಸ್ತವ, ದಿ ಕೋ–ಆಪರೇಟರ್ ಮಾಸ ಪತ್ರಿಕೆ.
ಅನುವಾದ : ಶ್ರೀಮತಿ ಕವಿತ ಆರ್, ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು




## CAMPCO

1. CAMPCO Posts Rs 3,735 Cr Turnover,
2. CAMPCO Marks Foundation Day, Celebrates 5 Decade Co-op Journey
3. CAMPCO to host book release on Areca Nut Research

ಭಾರತದ ಯಾವುದೇ ದಿನಸಿ ಅಂಗಡಿಗೆ ತೆರಳಿ ಬೆಣ್ಣೆ ಕೇಳಿದಾಗ, ಬಹುತೇಕ ಗ್ರಾಹಕರ ಮನಸ್ಸಿಗೆ ತಕ್ಷಣ ನೆನಪಾಗುವ ಹೆಸರು ಅಮುಲ್. ರೈತರು ರಸಗೊಬ್ಬರಗಳನ್ನು ಎಲ್ಲಿ ಖರೀದಿಸುತ್ತಾರೆ ಎಂದು ಕೇಳಿದರೆ, ಇಫ್ಕೊ (IFFCO) ಎಂಬ ಹೆಸರು ಸಹಜವಾಗಿ ನೆನಪಿಗೆ ಬರುತ್ತದೆ. ಕರ್ನಾಟಕಕ್ಕೆ ಭೇಟಿ ನೀಡಿದಾಗ ನಂದಿನಿ ಕೇವಲ ಒಂದು ಹಾಲು ಮತ್ತು ಹಾಲಿನ ಉತ್ಪನ್ನಗಳ ಬ್ರ್ಯಾಂಡ್ ಆಗಿರದೆ, ಜನರ ದೈನಂದಿನ ಜೀವನದ ಅವಿಭಾಜ್ಯ ಭಾಗವಾಗಿರುವುದನ್ನು ಕಾಣಬಹುದು. ಈ ಹೆಸರುಗಳು ಕೇವಲ ಅಂಗಡಿಗಳ ಕಪಾಟಿನಲ್ಲಿ ಕಾಣಿಸುವ ಉತ್ಪನ್ನಗಳಲ್ಲ; ಅವು ದಶಕಗಳ ಕಾಲ ಗಳಿಸಿದ ವಿಶ್ವಾಸ, ಗುಣಮಟ್ಟ, ಸ್ಥಿರತೆ ಹಾಗೂ ತಾವು ಸೇವೆ ಸಲ್ಲಿಸುವ ಸಮುದಾಯಗಳೊಂದಿಗೆ ಬೆಳೆಸಿಕೊಂಡಿರುವ ಗಾಢ ಸಂಬಂಧದ ಪ್ರತೀಕಗಳಾಗಿವೆ.

ಭಾರತದ ಸಹಕಾರ ಚಳುವಳಿ ಇಂದು ಪರಿವರ್ತನೆಯ ಹೊಸ ಹಂತವನ್ನು ಪ್ರವೇಶಿಸುತ್ತಿದೆ. ಹೈನುಗಾರಿಕೆ, ಕೃಷಿ, ಬ್ಯಾಂಕಿಂಗ್ ಮತ್ತು ಮಾರುಕಟ್ಟೆ ಕ್ಷೇತ್ರಗಳಂತಹ ಸಾಂಪ್ರದಾಯಿಕ ಕ್ಷೇತ್ರಗಳ ಜೊತೆಗೆ, ಸಹಕಾರಿ ಸಂಸ್ಥೆಗಳು ಈಗ ಸಾವಯವ ಉತ್ಪನ್ನಗಳು, ರಫ್ತು, ಡಿಜಿಟಲ್ ವೇದಿಕೆಗಳು ಹಾಗೂ ವಿವಿಧ ಸೇವಾ ಕ್ಷೇತ್ರಗಳಲ್ಲಿಯೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸುತ್ತಿವೆ. ಸರ್ಕಾರದ ವಿವಿಧ ಉಪಕ್ರಮಗಳು "ಸಹಕಾರದಿಂದ ಸಮೃದ್ಧಿ" ಎಂಬ ಆಶಯವನ್ನು ಬಲಪಡಿಸುವ ಮೂಲಕ ಸಹಕಾರಿ ಕ್ಷೇತ್ರದ ಸಾಂಸ್ಥಿಕ ಬೆಳವಣಿಗೆಗೆ ಹೊಸ ಅವಕಾಶಗಳನ್ನು ಕಲ್ಪಿಸಿವೆ. ಹೊಸ ರಾಷ್ಟ್ರೀಯ ಸಹಕಾರಿ ಸಂಸ್ಥೆಗಳ ಸ್ಥಾಪನೆ ಹಾಗೂ ಡಿಜಿಟಲ್ ತಂತ್ರಜ್ಞಾನಗಳ ಬಳಕೆಯ ವಿಸ್ತರಣೆಯು ಸಹಕಾರಿ ಸಂಸ್ಥೆಗಳಿಗೆ ಬೆಳವಣಿಗೆಯ ಹೊಸ ದಾರಿಗಳನ್ನು ತೆರೆದಿವೆ.

ಸಾಂಪ್ರದಾಯಿಕ ವ್ಯವಹಾರ ಸಂಸ್ಥೆಗಳಿಗೆ ಹೋಲಿಸಿದರೆ ಸಹಕಾರಿ ಸಂಸ್ಥೆಗಳಿಗೆ ಒಂದು ವಿಶಿಷ್ಟವಾದ ಬಲವಿದೆ. ಅವು ಸಾಮೂಹಿಕ ಮಾಲೀಕತ್ವ, ಪ್ರಜಾಸತ್ತಾತ್ಮಕ ಆಡಳಿತ ಮತ್ತು ಲಕ್ಷಾಂತರ ಸದಸ್ಯರ ಸಾಮೂಹಿಕ ಆಶಯಗಳ ಮೇಲೆ ನಿರ್ಮಾಣಗೊಂಡಿವೆ. ಆದ್ದರಿಂದ, ಪ್ರತಿಯೊಂದು ಯಶಸ್ವಿ ಸಹಕಾರಿ ಬ್ರ್ಯಾಂಡ್‌ನ ಹಿಂದೆ ಕೇವಲ ಒಂದು ಉತ್ಪನ್ನದ ಕಥೆಯಿರುವುದಿಲ್ಲ; ಅದರೊಂದಿಗೆ ರೈತರು, ಹಾಲು ಉತ್ಪಾದಕರು, ಮೀನುಗಾರರು, ಕುಶಲಕರ್ಮಿಗಳು ಹಾಗೂ ಗ್ರಾಮೀಣ ಜನರ ಪರಿಶ್ರಮ, ಬದುಕು ಮತ್ತು ಆಶಯಗಳ ಕಥೆಯೂ ಅಡಕವಾಗಿರುತ್ತದೆ.

ಇಂದಿನ ಹೆಚ್ಚುತ್ತಿರುವ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಕೇವಲ ಸಾಂಸ್ಥಿಕ ಬಲವು ಸಾಕಾಗುವುದಿಲ್ಲ. ಸಹಕಾರಿ ಸಂಸ್ಥೆಗಳು ತಾವು ನೀಡುವ ಗುಣಮಟ್ಟ, ವಿಶ್ವಾಸಾರ್ಹತೆ, ಪಾರದರ್ಶಕತೆ ಹಾಗೂ ಸಹಕಾರದ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ಬಲವಾದ ಬ್ರ್ಯಾಂಡ್‌ಗಳನ್ನು ನಿರ್ಮಿಸಬೇಕಾಗಿದೆ. ಗ್ರಾಹಕರಲ್ಲಿ ವಿಶ್ವಾಸ ಮೂಡಿಸುವುದು ಮತ್ತು ಅದನ್ನು ದೀರ್ಘಕಾಲ ಕಾಪಾಡಿಕೊಳ್ಳುವುದು ಸಹಕಾರಿ ಸಂಸ್ಥೆಗಳ ಮುಂದಿನ ಬೆಳವಣಿಗೆಗೆ ಅತ್ಯಂತ ಮಹತ್ವದ್ದಾಗಿದೆ.

ಅಮುಲ್, ಇಫ್ಕೊ ಮತ್ತು ಇತರ ಯಶಸ್ವಿ ಹಾಗೂ ಬೆಳೆಯುತ್ತಿರುವ ಸಹಕಾರಿ ಉದ್ಯಮಗಳ ಅನುಭವಗಳು ಬ್ರ್ಯಾಂಡ್ ನಿರ್ಮಾಣವೆಂದರೆ ಕೇವಲ ದುಬಾರಿ ಜಾಹೀರಾತುಗಳು ಅಥವಾ ಆಕರ್ಷಕ ಘೋಷಣೆಗಳಿಗೆ

ಸೀಮಿತವಾದುದಲ್ಲ ಎಂಬುದನ್ನು ತೋರಿಸುತ್ತವೆ. ಬ್ರ್ಯಾಂಡ್ ನಿರ್ಮಾಣವೆಂದರೆ ಜನರಿಗೆ ನೀಡಿದ ಭರವಸೆಯನ್ನು ನಿರಂತರವಾಗಿ ಈಡೇರಿಸುವ ಪ್ರಕ್ರಿಯೆ. ಪ್ರತಿಯೊಂದು ಉತ್ಪನ್ನದ ಗುಣಮಟ್ಟ, ಪ್ರತಿಯೊಂದು ಸೇವೆ ಮತ್ತು ಗ್ರಾಹಕರೊಂದಿಗೆ ನಡೆಯುವ ಪ್ರತಿಯೊಂದು ಸಂವಹನವೂ ಸಂಸ್ಥೆಯ ಬಗ್ಗೆ ಜನರ ಅಭಿಪ್ರಾಯವನ್ನು ರೂಪಿಸುತ್ತದೆ. ಇಂತಹ ಸತತ ಮತ್ತು ಉತ್ತಮ ಅನುಭವಗಳು ಕಾಲಕ್ರಮೇಣ ವಿಶ್ವಾಸವನ್ನು ಬೆಳೆಸುತ್ತವೆ; ಆ ವಿಶ್ವಾಸವೇ ಮುಂದೆ ಗ್ರಾಹಕರ ನಿಷ್ಠೆಯಾಗಿ ಪರಿವರ್ತನೆಯಾಗುತ್ತದೆ.

ಇಂದು ಭಾರತೀಯ ಸಹಕಾರಿ ಸಂಸ್ಥೆಗಳು ಸಾವಯವ ಆಹಾರ ಉತ್ಪನ್ನಗಳು, ರಫ್ತು, ಡಿಜಿಟಲ್ ಸೇವೆಗಳು ಹಾಗೂ ವಿವಿಧ ಹೊಸ ವ್ಯವಹಾರ ಕ್ಷೇತ್ರಗಳತ್ತ ವಿಸ್ತರಿಸುತ್ತಿರುವ ಸಂದರ್ಭದಲ್ಲಿ, ವಿಶ್ವಾಸಾರ್ಹ ಮತ್ತು ಬಲಿಷ್ಠ ಬ್ರ್ಯಾಂಡ್‌ಗಳನ್ನು ನಿರ್ಮಿಸುವ ಸಾಮರ್ಥ್ಯವು ಅವುಗಳ ಭವಿಷ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸಹಕಾರಿ ಸಂಸ್ಥೆಯ ಉತ್ಪನ್ನದ ಗುಣಮಟ್ಟದ ಜೊತೆಗೆ, ಅದರ ಹಿಂದೆ ಇರುವ ಮೌಲ್ಯಗಳು, ಸದಸ್ಯರ ಪಾಲ್ಗೊಳ್ಳುವಿಕೆ ಮತ್ತು ಸಮಾಜದ ಮೇಲಿನ ಬದ್ಧತೆಯನ್ನು ಜನರಿಗೆ ತಲುಪಿಸುವುದು ಯಶಸ್ವಿ ಸಹಕಾರಿ ಬ್ರ್ಯಾಂಡ್ ನಿರ್ಮಾಣದ ಮೂಲ ಅಂಶವಾಗಿದೆ.

ಉತ್ಪಾದನೆಯನ್ನು ವಿಸ್ತರಿಸುವಷ್ಟೇ ಮಾರುಕಟ್ಟೆ ಪಾಲನ್ನು ಹೆಚ್ಚಿಸಿಕೊಳ್ಳುವುದೂ ಸಹಕಾರಿ ಸಂಸ್ಥೆಗಳಿಗೆ ಮಹತ್ವದ್ದಾಗಿದೆ. ಆದ್ದರಿಂದ, ಸಹಕಾರಿ ಚಳುವಳಿಯ ಭವಿಷ್ಯವು ಕೇವಲ ಅದು ಏನನ್ನು ಉತ್ಪಾದಿಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುವುದಿಲ್ಲ; ಬದಲಾಗಿ, ಗ್ರಾಹಕರು ಆ ಸಂಸ್ಥೆ ಅಥವಾ ಬ್ರ್ಯಾಂಡ್‌ನ್ನು ಹೇಗೆ ನೆನಪಿಸಿಕೊಳ್ಳುತ್ತಾರೆ, ಎಷ್ಟರ ಮಟ್ಟಿಗೆ ನಂಬುತ್ತಾರೆ ಮತ್ತು ಇತರರಿಗೆ ಶಿಫಾರಸು ಮಾಡುತ್ತಾರೆ ಎಂಬುದರ ಮೇಲೂ ಅವಲಂಬಿತವಾಗಿರುತ್ತದೆ.

ಭಾರತದ ಪ್ರಮುಖ ಸಹಕಾರಿ ಸಂಸ್ಥೆಗಳ ಪಯಣವನ್ನು ಅರ್ಥಮಾಡಿಕೊಳ್ಳುವ ಮೊದಲು, 'ಬ್ರ್ಯಾಂಡ್' ಎಂದರೇನು ಮತ್ತು ಅದು ಯಾವುದನ್ನು ಪ್ರತಿನಿಧಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಉಪಯುಕ್ತವಾಗಿದೆ. ಬ್ರ್ಯಾಂಡ್ ತಜ್ಞ ಕೆವಿನ್ ಲೇನ್ ಕೆಲ್ಲರ್ ಅವರ ಪ್ರಕಾರ, ಬ್ರ್ಯಾಂಡ್ ಎಂದರೆ ಕೇವಲ ಒಂದು ಹೆಸರು, ಲೋಗೋ ಅಥವಾ ಚಿಹ್ನೆಯಲ್ಲ. ಅದು ಗ್ರಾಹಕರು ಒಂದು ಸಂಸ್ಥೆ ಅಥವಾ ಉತ್ಪನ್ನದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಆಲೋಚನೆಗಳು, ಭಾವನೆಗಳು, ಅನುಭವಗಳು ಮತ್ತು ಗ್ರಹಿಕೆಗಳ ಸಮಗ್ರ ರೂಪವಾಗಿದೆ.

ಗ್ರಾಹಕರು ಒಂದು ಬ್ರ್ಯಾಂಡ್‌ನೊಂದಿಗೆ ನಿರಂತರವಾಗಿ ಸಕಾರಾತ್ಮಕ ಅನುಭವವನ್ನು ಹೊಂದಿದಾಗ, ಅದರ ಗುಣಮಟ್ಟದ ಮೇಲೆ ವಿಶ್ವಾಸ ಬೆಳೆಸಿಕೊಂಡಾಗ ಮತ್ತು ಆ ಬ್ರ್ಯಾಂಡ್‌ನೊಂದಿಗೆ ಬೆಸೆದುಕೊಂಡಿರುವ ಸಕಾರಾತ್ಮಕ ಮೌಲ್ಯಗಳು ಅವರ ಖರೀದಿ ನಿರ್ಧಾರಗಳ ಮೇಲೆ ಪ್ರಭಾವ ಬೀರಿದಾಗ ಬಲಿಷ್ಠ ಬ್ರ್ಯಾಂಡ್ ರೂಪುಗೊಳ್ಳುತ್ತದೆ.

### ವಿಶ್ವಾಸ : ಪ್ರತಿಯೊಂದು ಶ್ರೇಷ್ಠ ಸಹಕಾರಿ ಬ್ರ್ಯಾಂಡ್‌ನ ಅಡಿಪಾಯ

ಪ್ರತಿಯೊಂದು ಯಶಸ್ವಿ ಸಹಕಾರಿ ಬ್ರ್ಯಾಂಡ್‌ನಲ್ಲಿಯೂ ಒಂದು ಸಾಮಾನ್ಯ ಅಂಶವಿದೆ: ಅದು ಕಾಲಕ್ರಮೇಣ ಜನರ ವಿಶ್ವಾಸವನ್ನು ಗಳಿಸಿರುತ್ತದೆ. ಜಾಹೀರಾತು ಮತ್ತು ಪ್ರಚಾರ ಅಭಿಯಾನಗಳು ಬ್ರ್ಯಾಂಡ್ ಬಗ್ಗೆ ಜಾಗೃತಿ ಮೂಡಿಸಬಹುದು; ಆದರೆ ಅವುಗಳಿಂದ ಮಾತ್ರ ದೀರ್ಘಕಾಲೀನ ವಿಶ್ವಾಸವನ್ನು ನಿರ್ಮಿಸಲು ಸಾಧ್ಯವಿಲ್ಲ. ಗ್ರಾಹಕರು ಒಂದು ಬ್ರ್ಯಾಂಡ್‌ನೊಂದಿಗೆ ನಿರಂತರವಾಗಿ ಉತ್ತಮ ಅನುಭವವನ್ನು ಹೊಂದಿ, ಅದು ತಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಗುಣಮಟ್ಟ ಮತ್ತು ಸೇವೆಯನ್ನು ಒದಗಿಸುತ್ತದೆ ಎಂಬ ವಿಶ್ವಾಸವನ್ನು ಬೆಳೆಸಿಕೊಂಡಾಗ, ಆ ಬ್ರ್ಯಾಂಡ್ ಅವರ ಮನಸ್ಸಿನಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುತ್ತದೆ.

ವಿಶ್ವಾಸದ ಮೇಲೆ ನಿರ್ಮಾಣವಾದ ಸಹಕಾರಿ ಬ್ರ್ಯಾಂಡ್ ಇದಕ್ಕೆ ಅತ್ಯುತ್ತಮ ಉದಾಹರಣೆಗಳಲ್ಲಿ ಅಮುಲ್ ಪ್ರಮುಖವಾಗಿದೆ. ಗುಜರಾತ್‌ನಲ್ಲಿ ರೈತರ ಚಳುವಳಿಯಾಗಿ ಆರಂಭವಾದ ಅಮುಲ್, ಇಂದು ಭಾರತದ ಅತ್ಯಂತ ಪರಿಚಿತ ಮತ್ತು ವಿಶ್ವಾಸಾರ್ಹ ಆಹಾರ ಬ್ರ್ಯಾಂಡ್‌ಗಳಲ್ಲಿ ಒಂದಾಗಿ ಬೆಳೆದಿದೆ.

ಅಮುಲ್‌ನ ಯಶಸ್ಸಿಗೆ ಅದರ ಗುಣಮಟ್ಟದ ಉತ್ಪನ್ನಗಳು ಮತ್ತು ಜನಮನದಲ್ಲಿ ಉಳಿದಿರುವ ಜಾಹೀರಾತುಗಳು ಪ್ರಮುಖ ಕಾರಣಗಳಾಗಿವೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಅದರ ನಿಜವಾದ ಶಕ್ತಿ ವಿಶ್ವಾಸ, ನಿರಂತರತೆ ಮತ್ತು ಸಹಕಾರಿ ಮೌಲ್ಯಗಳಲ್ಲಿ ಅಡಗಿದೆ. ಅಮುಲ್ ಎಂಬ ಹೆಸರು ತಾಜಾತನ, ಕೈಗೆಟುಕುವ ಬೆಲೆ ಮತ್ತು ವಿಶ್ವಾಸಾರ್ಹ ಗುಣಮಟ್ಟದೊಂದಿಗೆ ಸಂಬಂಧ ಹೊಂದಿದೆ. ಈ ಮೌಲ್ಯಗಳು ಹಲವು ದಶಕಗಳಿಂದ ನಿರಂತರವಾಗಿ ಉಳಿದುಕೊಂಡಿವೆ.

ಅಮುಲ್ ತನ್ನ ಸಹಕಾರಿ ಗುರುತನ್ನು ಉಳಿಸಿಕೊಂಡೇ ತನ್ನ ಬ್ರ್ಯಾಂಡ್‌ನ್ನು ಬೆಳೆಸಿಕೊಂಡಿದೆ. ಈ ನಿರಂತರತೆ ಮತ್ತು ವಿಶ್ವಾಸಾರ್ಹತೆಯು ಭಾರತೀಯ ಕುಟುಂಬಗಳ ಹಲವು ಪೀಳಿಗೆಗಳೊಂದಿಗೆ ಅದರ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಹೀಗಾಗಿ, ಅಮುಲ್‌ನ ಯಶಸ್ಸು ಕೇವಲ ಉತ್ಪನ್ನದ ಯಶಸ್ಸಾಗಿರದೆ, ರೈತರು, ಗ್ರಾಹಕರು ಮತ್ತು ಸಹಕಾರಿ ಸಂಸ್ಥೆಯ ನಡುವಿನ ದೀರ್ಘಕಾಲೀನ ವಿಶ್ವಾಸದ ಯಶಸ್ಸಾಗಿದೆ.

ಸಹಕಾರಿ ಡೈರಿ ಬ್ರ್ಯಾಂಡ್‌ಗಳ ನಿರಂತರ ಬೆಳವಣಿಗೆಯು, ರೈತ ಮಾಲೀಕತ್ವದ ಸಹಕಾರಿ ಸಂಸ್ಥೆಯೊಂದು ಸಹಕಾರಿ ಮೌಲ್ಯಗಳಲ್ಲಿ ಬದ್ಧವಾಗಿ ಕಾರ್ಯನಿರ್ವಹಿಸಿದರೆ, ದೊಡ್ಡ ಬಹುರಾಷ್ಟ್ರೀಯ ಬ್ರ್ಯಾಂಡ್‌ಗಳೊಂದಿಗೆ ಸ್ಪರ್ಧಿಸುವ ಸಾಮರ್ಥ್ಯವನ್ನು ಹೊಂದಬಹುದು ಎಂಬುದನ್ನು ತೋರಿಸುತ್ತದೆ.

ಇಫ್ಕೋ – ಕೃಷಿಯಲ್ಲಿ ರೈತರ ವಿಶ್ವಾಸಾರ್ಹ ಪಾಲುದಾರ : ಲಕ್ಷಾಂತರ ರೈತರಿಗೆ ಇಫ್ಕೋ ಕೇವಲ ರಸಗೊಬ್ಬರ ಉತ್ಪಾದಿಸುವ ಸಂಸ್ಥೆಯಲ್ಲ; ಅದು ಕೃಷಿ ಕ್ಷೇತ್ರದಲ್ಲಿ ಅವರೊಂದಿಗೆ ಕೈಜೋಡಿಸುವ ವಿಶ್ವಾಸಾರ್ಹ ಪಾಲುದಾರವಾಗಿದೆ.

ನಿರಂತರ ರೈತ ಶಿಕ್ಷಣ ಮತ್ತು ವಿಸ್ತರಣಾ ಸೇವೆಗಳನ್ನು ಒದಗಿಸುವುದು, ಸಂಶೋಧನೆ ಆಧಾರಿತ ನವೀನ ಉತ್ಪನ್ನಗಳನ್ನು ಪರಿಚಯಿಸುವುದು ಹಾಗೂ ವ್ಯಾಪಕವಾದ ಸಹಕಾರಿ ಜಾಲದ ಮೂಲಕ ರೈತರೊಂದಿಗೆ ನಿರಂತರ ಸಂಪರ್ಕ ಹೊಂದಿರುವುದು ಇಫ್ಕೋಗೆ ತನ್ನ ಉತ್ಪನ್ನಗಳಾಚೆಗೂ ವಿಶ್ವಾಸಾರ್ಹತೆಯನ್ನು ನಿರ್ಮಿಸಲು ನೆರವಾಗಿದೆ.

ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಉತ್ತಮ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ನಿರಂತರವಾಗಿ ಬೆಂಬಲ ನೀಡಿರುವುದರಿಂದ, ಇಫ್ಕೋ ಎಂಬ ಹೆಸರಿನ ಮೇಲೆ ರೈತರಲ್ಲಿ ವಿಶ್ವಾಸ ಬೆಳೆದಿದೆ. ಸಂಸ್ಥೆಯ ಖ್ಯಾತಿಯು ಕೇವಲ ಅದರ ಉತ್ಪನ್ನಗಳ ಗುಣಮಟ್ಟದಿಂದ ಮಾತ್ರವಲ್ಲದೆ, ರೈತರೊಂದಿಗೆ ಅದು ಬೆಳೆಸಿಕೊಂಡಿರುವ ದೀರ್ಘಕಾಲೀನ ಸಂಬಂಧದಿಂದಲೂ ರೂಪುಗೊಂಡಿದೆ.

ಇಫ್ಕೋನ ವ್ಯಾಪಕ ಕಾರ್ಯಚಟುವಟಿಕೆಗಳು ಅದರ ಬ್ರ್ಯಾಂಡ್‌ನ ಬಲವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ. 1967ರಲ್ಲಿ ಕೇವಲ 57 ಸಹಕಾರಿ ಸಂಘಗಳೊಂದಿಗೆ ಆರಂಭವಾದ ಇಫ್ಕೋ, ಇಂದು ದೇಶಾದ್ಯಂತ ಕೋಟ್ಯಂತರ ರೈತರಿಗೆ ಸೇವೆ ಸಲ್ಲಿಸುವ ವಿಶಾಲ ಸಹಕಾರಿ ಜಾಲವಾಗಿ ಬೆಳೆದಿದೆ.

ಇಂತಹ ಸಾಧನೆಗಳು ರೈತರ ನಿರಂತರ ಸಹಭಾಗಿತ್ವ, ಅವರೊಂದಿಗೆ ಬೆಳೆಸಿಕೊಂಡಿರುವ ವಿಶ್ವಾಸಾರ್ಹ ಸಂಬಂಧ ಮತ್ತು ಅವರಿಗೆ ನಿರಂತರವಾಗಿ ಮೌಲ್ಯವನ್ನು ಒದಗಿಸುವ ಬದ್ಧತೆಗಳು ಒಂದು ಸಹಕಾರಿ ಸಂಸ್ಥೆಯ ಬ್ರ್ಯಾಂಡ್‌ಗೆ ಹೇಗೆ ದೀರ್ಘಕಾಲೀನ ಬಲವನ್ನು ನೀಡುತ್ತವೆ ಎಂಬುದನ್ನು ಪ್ರತಿಬಿಂಬಿಸುತ್ತವೆ.

ಅಮುಲ್ ಮತ್ತು ಇಫ್ಕೋಗಳ ಅನುಭವದಿಂದ ಸ್ಪಷ್ಟವಾಗುವ ಪ್ರಮುಖ ಪಾಠವೆಂದರೆ – ಬಲಿಷ್ಠ ಸಹಕಾರಿ ಬ್ರ್ಯಾಂಡ್‌ನ್ನು ಕೇವಲ ಜಾಹೀರಾತಿನಿಂದ ನಿರ್ಮಿಸಲು ಸಾಧ್ಯವಿಲ್ಲ; ಅದನ್ನು ಗುಣಮಟ್ಟ, ನಿರಂತರ ಸೇವೆ, ಸದಸ್ಯರ ಪಾಲ್ಗೊಳ್ಳುವಿಕೆ, ಪಾರದರ್ಶಕತೆ ಮತ್ತು ದೀರ್ಘಕಾಲೀನ ವಿಶ್ವಾಸದ ಮೂಲಕ ನಿರ್ಮಿಸಬೇಕು.

### ಸಾಂಪ್ರದಾಯಿಕ ವಲಯಗಳನ್ನು ಮೀರಿ ಸಹಕಾರಿ ಬ್ರ್ಯಾಂಡಿಂಗ್

ಸಹಕಾರಿ ಸಂಸ್ಥೆಗಳು ಸಹಕಾರಿ ಚಳುವಳಿಯ ಬೆನ್ನೆಲುಬಾಗಿ ಮುಂದುವರಿದಿದ್ದರೂ, ಬದಲಾಗುತ್ತಿರುವ ಗ್ರಾಹಕರ ಆದ್ಯತೆಗಳು, ಮಾರುಕಟ್ಟೆಯ ಹೊಸ ಬೇಡಿಕೆಗಳು ಹಾಗೂ ತ್ವರಿತಗತಿಯಲ್ಲಿ ನಡೆಯುತ್ತಿರುವ ತಾಂತ್ರಿಕ ಪ್ರಗತಿಗಳು ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ವಲಯಗಳನ್ನು ಮೀರಿ ಹೊಸ ಕ್ಷೇತ್ರಗಳು ಮತ್ತು ನವೀನ ವ್ಯವಹಾರ ಮಾದರಿಗಳನ್ನು ಅನ್ವೇಷಿಸುವಂತೆ ಮಾಡುತ್ತಿವೆ. ಈ ವಿಕಸನಗೊಳ್ಳುತ್ತಿರುವ ಪರಿಸರದಲ್ಲಿ, ವರ್ತಮಾನಕ್ಕೆ ಪ್ರಸ್ತುತವಾಗಿರುವುದರ ಜೊತೆಗೆ ಭವಿಷ್ಯದ ಸವಾಲುಗಳಿಗೆ ಸಿದ್ಧವಾಗಿರುವ ಬಲಿಷ್ಠ ಸಹಕಾರಿ ಬ್ರ್ಯಾಂಡ್‌ಗಳನ್ನು ನಿರ್ಮಿಸುವಲ್ಲಿ ನಾವೀನ್ಯತೆ ಪ್ರಮುಖ ಪಾತ್ರ ವಹಿಸುತ್ತದೆ.

ಇತ್ತೀಚಿನ ಗಮನಾರ್ಹ ಉಪಕ್ರಮಗಳಲ್ಲಿ ಸಹಕಾರ್ ಟ್ಯಾಕ್ಸಿ ಪ್ರಮುಖ ಉದಾಹರಣೆಯಾಗಿದೆ. ಕೃಷಿ ಮತ್ತು ಉತ್ಪಾದನಾ ಕ್ಷೇತ್ರಗಳನ್ನು ಮೀರಿ ಸಹಕಾರಿ ತತ್ವಗಳನ್ನು ಸೇವಾ ಕ್ಷೇತ್ರದಲ್ಲಿಯೂ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಇದು ತೋರಿಸುತ್ತದೆ. ಸಹಕಾರಿ ಆಧಾರಿತ ರೈಡ್–ಹೇಲಿಂಗ್ ವೇದಿಕೆಯಾಗಿ ರೂಪುಗೊಂಡಿರುವ ಈ ಪರಿಕಲ್ಪನೆಯು ಚಾಲಕರನ್ನು ಕೇವಲ ಸೇವಾ ಪೂರೈಕೆದಾರರನ್ನಾಗಿ ಪರಿಗಣಿಸುವ ಬದಲು, ವ್ಯವಹಾರದ ಪ್ರಮುಖ ಭಾಗೀದಾರರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿದೆ. ಗ್ರಾಹಕರು ನೈತಿಕ ವ್ಯವಹಾರ ಪದ್ಧತಿ, ಪಾರದರ್ಶಕತೆ, ನ್ಯಾಯಸಮ್ಮತತೆ ಮತ್ತು ಸಮಾವೇಶಿತ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡುತ್ತಿರುವ ಇಂದಿನ ಸಂದರ್ಭದಲ್ಲಿ, ಇಂತಹ ಉಪಕ್ರಮಗಳು ಸಹಕಾರಿ ತತ್ವಗಳು ಆಧುನಿಕ ಸೇವಾ ಬ್ರ್ಯಾಂಡ್‌ಗಳ ವಿಶಿಷ್ಟ ಗುರುತಾಗಲು ಸಾಧ್ಯವಿದೆ ಎಂಬುದನ್ನು ಸೂಚಿಸುತ್ತವೆ.

ಅದೇ ರೀತಿ, ರಾಷ್ಟ್ರೀಯ ಸಹಕಾರಿ ರಫ್ತು ಲಿಮಿಟೆಡ್ (NCEL) ಸ್ಥಾಪನೆಯು ಭಾರತೀಯ ಸಹಕಾರಿ ಸಂಸ್ಥೆಗಳು ದೇಶೀಯ ಮಾರುಕಟ್ಟೆಗಳನ್ನು ಮೀರಿ ಜಾಗತಿಕ ಮಾರುಕಟ್ಟೆಗಳಲ್ಲಿ ತಮ್ಮ ಉತ್ಪನ್ನಗಳಿಗೆ ಅವಕಾಶಗಳನ್ನು ಸೃಷ್ಟಿಸುವತ್ತ ಸಾಗುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ಇಂದಿನ ಜಾಗತಿಕ ಗ್ರಾಹಕರು ಗುಣಮಟ್ಟದ ಜೊತೆಗೆ ನೈಸರ್ಗಿಕವಾಗಿ ಉತ್ಪಾದಿಸಲ್ಪಟ್ಟ, ಸುಸ್ಥಿರ ಹಾಗೂ ನೈತಿಕವಾಗಿ ಮೂಲ ಹೊಂದಿರುವ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ರೈತರು ಮತ್ತು ಪ್ರಾಥಮಿಕ ಉತ್ಪಾದಕರನ್ನು ಪ್ರತಿನಿಧಿಸುವ ಭಾರತೀಯ ಸಹಕಾರಿ ಸಂಸ್ಥೆಗಳು ಈ ನಿರೀಕ್ಷೆಗಳನ್ನು ಪೂರೈಸಲು ಉತ್ತಮ ಅವಕಾಶವನ್ನು ಹೊಂದಿವೆ. ಆದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಶಸ್ಸು ಸಾಧಿಸಲು ಉತ್ತಮ ಗುಣಮಟ್ಟದ ಉತ್ಪನ್ನ ಮಾತ್ರ ಸಾಕಾಗುವುದಿಲ್ಲ. ಉತ್ಪನ್ನದ ವಿಶ್ವಾಸಾರ್ಹತೆ, ಪತ್ತೆಹಚ್ಚುವಿಕೆ, ಗುಣಮಟ್ಟದ ಮಾನದಂಡಗಳ ಅನುಸರಣೆ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಹೊಂದಿಕೊಳ್ಳುವಂತಹ ಸ್ಥಿರವಾದ ಬ್ರ್ಯಾಂಡ್ ಗುರುತು ಅಗತ್ಯವಾಗುತ್ತದೆ.

ಡಿಜಿಟಲ್ ರೂಪಾಂತರವು ಸಹಕಾರಿ ಬ್ರ್ಯಾಂಡ್‌ಗಳು ಗ್ರಾಹಕರೊಂದಿಗೆ ಸಂಪರ್ಕ ಸಾಧಿಸುವ ವಿಧಾನವನ್ನೂ ಸಂಪೂರ್ಣವಾಗಿ ಬದಲಾಯಿಸುತ್ತಿದೆ. ಸಾಮಾಜಿಕ ಮಾಧ್ಯಮ, ಇ–ಕಾಮರ್ಸ್ ವೇದಿಕೆಗಳು ಹಾಗೂ ಆನ್‌ಲೈನ್ ಮಾರುಕಟ್ಟೆಗಳು ಉತ್ಪಾದಕರು ಮತ್ತು ಗ್ರಾಹಕರ ನಡುವಿನ ಅಂತರವನ್ನು ಕಡಿಮೆ ಮಾಡಿವೆ. ಜೇನುತುಪ್ಪ, ಮಸಾಲೆ ಪದಾರ್ಥಗಳು, ಕರಕುಶಲ ವಸ್ತುಗಳು ಅಥವಾ ರಾಗಿ ಆಧಾರಿತ ಆಹಾರ ಉತ್ಪನ್ನಗಳನ್ನು ತಯಾರಿಸುವ ಸಣ್ಣ ಸಹಕಾರಿ ಸಂಸ್ಥೆಯೂ ಸಹ ತನ್ನ ಉತ್ಪನ್ನದ ಗುಣಮಟ್ಟವನ್ನು ಕಾಪಾಡಿಕೊಂಡು, ತನ್ನ ಉತ್ಪಾದಕರ ಕಥೆಯನ್ನು ಪರಿಣಾಮಕಾರಿಯಾಗಿ ಗ್ರಾಹಕರಿಗೆ ತಲುಪಿಸಿದರೆ, ದೇಶದ ವಿವಿಧ ಭಾಗಗಳಲ್ಲಿರುವ ಗ್ರಾಹಕರನ್ನು ತಲುಪುವ ಅವಕಾಶವನ್ನು ಹೊಂದಿದೆ.

ಉತ್ಪನ್ನವನ್ನು ತಯಾರಿಸುವ ರೈತರು ಯಾರು, ಯಾವ ರೀತಿಯ

ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸಲಾಗಿದೆ, ಉತ್ಪನ್ನದ ತಯಾರಿಕೆಯಿಂದ ಯಾವ ಸಮುದಾಯಕ್ಕೆ ಪ್ರಯೋಜನವಾಗುತ್ತದೆ ಮತ್ತು ಅದರ ಹಿಂದೆ ಇರುವ ಸಹಕಾರಿ ಮೌಲ್ಯಗಳೇನು ಎಂಬ ಮಾಹಿತಿಯು ಗ್ರಾಹಕರೊಂದಿಗೆ ಭಾವನಾತ್ಮಕ ಸಂಬಂಧವನ್ನು ಬೆಳೆಸಲು ಸಹಕಾರಿಯಾಗುತ್ತದೆ. ಹೀಗಾಗಿ, ಸಹಕಾರಿ ಬ್ರ್ಯಾಂಡಿಂಗ್‌ನಲ್ಲಿ ಉತ್ಪನ್ನದ ಜೊತೆಗೆ ಅದರ ಮೌಲ್ಯಗಳು, ಮೂಲ ಮತ್ತು ಸಾಮಾಜಿಕ ಪರಿಣಾಮವನ್ನು ಪರಿಣಾಮಕಾರಿಯಾಗಿ ಪರಿಚಯಿಸುವುದು ಅಗತ್ಯವಾಗಿದೆ.

ಆದ್ದರಿಂದ, ನಾವೀನ್ಯತೆ ಎಂದರೆ ಕೇವಲ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅಥವಾ ಹೊಸ ಸೇವೆಯನ್ನು ಪ್ರಾರಂಭಿಸುವುದಷ್ಟೇ ಅಲ್ಲ. ಬದಲಾಗುತ್ತಿರುವ ಗ್ರಾಹಕರ ನಿರೀಕ್ಷೆಗಳಿಗೆ ಸ್ಪಂದಿಸುತ್ತಾ, ಸಹಕಾರಿ ಸಂಸ್ಥೆಗಳ ಮೂಲ ಮೌಲ್ಯಗಳಾದ ಸ್ವಾಯತ್ತತೆ, ಸದಸ್ಯರ ಭಾಗವಹಿಸುವಿಕೆ, ಪ್ರಜಾಸತ್ತಾತ್ಮಕ ನಿಯಂತ್ರಣ, ಪರಸ್ಪರ ಸಹಕಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಉಳಿಸಿಕೊಳ್ಳುವುದೂ ನಾವೀನ್ಯತೆಯ ಒಂದು ಭಾಗವಾಗಿದೆ.

ಭಾರತದ ಸಹಕಾರಿ ಕ್ಷೇತ್ರದ ಮುಂದಿನ ಬೆಳವಣಿಗೆಯನ್ನು ಮುನ್ನಡೆಸುವ ಸಂಸ್ಥೆಗಳು ತಮ್ಮ ದೀರ್ಘಕಾಲದ ನಂಬಿಕೆ ಮತ್ತು ಪರಂಪರೆಯನ್ನು ಆಧುನಿಕ ವ್ಯವಹಾರ ಪದ್ಧತಿಗಳು, ಡಿಜಿಟಲ್ ತೊಡಗಿಸಿಕೊಳ್ಳುವಿಕೆ, ಗುಣಮಟ್ಟದ ಮಾನದಂಡಗಳು ಹಾಗೂ ಮಾರುಕಟ್ಟೆ ಆಧಾರಿತ ಚಿಂತನೆಯೊಂದಿಗೆ ಸಮನ್ವಯಗೊಳಿಸುವ ಅಗತ್ಯವಿದೆ. ಈ ಸಮನ್ವಯದ ಮೂಲಕ ಸಹಕಾರಿ ಸಂಸ್ಥೆಗಳು ಪ್ರಸ್ತುತ ಗ್ರಾಹಕರ ವಿಶ್ವಾಸವನ್ನು ಗಳಿಸುವುದರ ಜೊತೆಗೆ, ಮುಂದಿನ ಪೀಳಿಗೆಯ ಗ್ರಾಹಕರಿಗೂ ಪ್ರಸ್ತುತವಾಗಿರುವ ಬಲಿಷ್ಠ ಮತ್ತು ವಿಶ್ವಾಸಾರ್ಹ ಬ್ರ್ಯಾಂಡ್‌ಗಳನ್ನು ನಿರ್ಮಿಸಬಹುದು.

### ಯಶಸ್ವಿ ಸಹಕಾರಿ ಬ್ರ್ಯಾಂಡ್‌ಗಳ ಕೆಲವು ಉದಾಹರಣೆಗಳು

ಸಹಕಾರಿ ಬ್ರ್ಯಾಂಡಿಂಗ್‌ನ ಯಶಸ್ಸು ಕೆಲವೇ ಪ್ರಸಿದ್ಧ ಸಂಸ್ಥೆಗಳಿಗೆ ಸೀಮಿತವಾಗಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯ ಕೇಂದ್ರಿತ ಕಾರ್ಯವೈಖರಿ, ಗುಣಮಟ್ಟ, ವಿಶ್ವಾಸಾರ್ಹತೆ ಮತ್ತು ಸಾಮಾಜಿಕ ಬದ್ಧತೆಯ ಮೂಲಕ ಬಲಿಷ್ಠ ಬ್ರ್ಯಾಂಡ್ ಗುರುತನ್ನು ನಿರ್ಮಿಸಿಕೊಂಡಿವೆ.

ಕ್ರಿಭ್ಕೋ ದಶಕಗಳಿಂದ ಕೃಷಿ ಒಳಹರಿವು, ರೈತರಿಗೆ ವಿಸ್ತರಣಾ ಸೇವೆಗಳು ಹಾಗೂ ಸದಸ್ಯ ಕೇಂದ್ರಿತ ಉಪಕ್ರಮಗಳ ಮೂಲಕ ರೈತರ ವಿಶ್ವಾಸವನ್ನು ಗಳಿಸಿದೆ. ಇದರಿಂದ ದೀರ್ಘಕಾಲೀನ ವಿಶ್ವಾಸಾರ್ಹತೆ ಮತ್ತು ನಿರಂತರ ಸೇವೆಯು ಬಲಿಷ್ಠ ಸಹಕಾರಿ ಬ್ರ್ಯಾಂಡ್‌ನ ಪ್ರಮುಖ ಅಡಿಪಾಯಗಳಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ಅದೇ ರೀತಿ, ಕರ್ನಾಟಕ ಹಾಲು ಒಕ್ಕೂಟ (KMF)ನ 'ನಂದಿನಿ' ಬ್ರ್ಯಾಂಡ್ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ನಿರಂತರವಾಗಿ ಗ್ರಾಹಕರಿಗೆ ಒದಗಿಸುವುದರ ಜೊತೆಗೆ, ಹಾಲು ಉತ್ಪಾದಕ ರೈತರೊಂದಿಗೆ ತನ್ನ ಬಲವಾದ ಸಂಪರ್ಕವನ್ನು ಉಳಿಸಿಕೊಂಡಿದೆ. ಇದರ ಮೂಲಕ ಪ್ರಾದೇಶಿಕ ಸಹಕಾರಿ ಸಂಸ್ಥೆಯೊಂದು ವ್ಯಾಪಕ ಗ್ರಾಹಕ ವಲಯದಲ್ಲಿ ಗುರುತಿಸಿಕೊಂಡಿರುವ ಬ್ರ್ಯಾಂಡ್ ಆಗಿ ಬೆಳೆಯುವ ಸಾಧ್ಯತೆಯನ್ನು ತೋರಿಸಿದೆ.

ಕೃಷಿಯ ಹೊರತಾಗಿ, ಶ್ರೀ ಮಹಿಳಾ ಗೃಹ ಉದ್ಯೋಗ ಲಿಜ್ಜತ್ ಪಾಪಡ್ ಮಹಿಳಾ ಉದ್ಯಮಶೀಲತೆ, ಸ್ವಾವಲಂಬನೆ ಮತ್ತು ಸಾಮಾಜಿಕ ಸಬಲೀಕರಣದ ಮೌಲ್ಯಗಳನ್ನು ಉತ್ಪನ್ನದ ಗುಣಮಟ್ಟ ಮತ್ತು ಸ್ಥಿರತೆಯೊಂದಿಗೆ ಸಂಯೋಜಿಸಿರುವ ಗಮನಾರ್ಹ ಉದಾಹರಣೆಯಾಗಿದೆ. ಸಹಕಾರಿ ಮೌಲ್ಯಗಳು ಮತ್ತು ಸಾಮಾಜಿಕ ಉದ್ದೇಶಗಳನ್ನು ಬಲಿಷ್ಠ ಉತ್ಪನ್ನ ಬ್ರ್ಯಾಂಡ್‌ನೊಂದಿಗೆ ಸಂಯೋಜಿಸುವ ಮೂಲಕ ದೀರ್ಘಕಾಲೀನ ಗ್ರಾಹಕ ನಿಷ್ಠೆಯನ್ನು ಬೆಳೆಸಬಹುದು ಎಂಬುದನ್ನು ಇದು ತೋರಿಸುತ್ತದೆ.

ಇನ್ನೊಂದು ಗಮನಾರ್ಹ ಉದಾಹರಣೆಯೆಂದರೆ ಉರಳುಂಗಲ್ ಕಾರ್ಮಿಕ ಗುತ್ತಿಗೆ ಸಹಕಾರಿ ಸಂಘ (ULCCS). ಮೂಲಸೌಕರ್ಯ, ನಿರ್ಮಾಣ ಮತ್ತು ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿರುವ ಈ ಸಂಸ್ಥೆಯ ಬೆಳವಣಿಗೆಯು ಸಹಕಾರಿ ಮಾಲೀಕತ್ವ, ವೃತ್ತಿಪರ ನಿರ್ವಹಣೆ, ಸದಸ್ಯರ ಭಾಗವಹಿಸುವಿಕೆ ಮತ್ತು ಹೊಣೆಗಾರಿಕೆಯ ತತ್ವಗಳನ್ನು ಆಧುನಿಕ ಹಾಗೂ ಸ್ಪರ್ಧಾತ್ಮಕ ಕ್ಷೇತ್ರಗಳಲ್ಲಿಯೂ ಯಶಸ್ವಿಯಾಗಿ ಅನ್ವಯಿಸಬಹುದು ಎಂಬುದನ್ನು ತೋರಿಸುತ್ತದೆ.

ಈ ಉದಾಹರಣೆಗಳು ಒಂದು ಪ್ರಮುಖ ಅಂಶವನ್ನು ಪುನರುಚ್ಚರಿಸುತ್ತವೆ: ಸಹಕಾರಿ ಬ್ರ್ಯಾಂಡ್‌ನ ಶಕ್ತಿ ಕೇವಲ ಅದರ ಉತ್ಪನ್ನ ಅಥವಾ ಸೇವೆಯಲ್ಲಿ ಇರುವುದಿಲ್ಲ; ಅದರ ಸದಸ್ಯರ ಮೇಲಿನ ಬದ್ಧತೆ, ಗ್ರಾಹಕರ ವಿಶ್ವಾಸ, ಗುಣಮಟ್ಟ, ಪಾರದರ್ಶಕತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಬದಲಾಗುತ್ತಿರುವ ಕಾಲಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯದಲ್ಲಿಯೂ ಅಡಗಿದೆ. ಹೀಗಾಗಿ, ಸಾಂಪ್ರದಾಯಿಕ ವಲಯಗಳನ್ನು ಮೀರಿ ಹೊಸ ಕ್ಷೇತ್ರಗಳಲ್ಲಿ ಪ್ರವೇಶಿಸುವ ಸಹಕಾರಿ ಸಂಸ್ಥೆಗಳು ತಮ್ಮ ಮೂಲ ಸಹಕಾರಿ ಮೌಲ್ಯಗಳನ್ನು ಆಧುನಿಕ ಬ್ರ್ಯಾಂಡಿಂಗ್ ಮತ್ತು ನಾವೀನ್ಯತೆಯೊಂದಿಗೆ ಸಂಯೋಜಿಸುವ ಮೂಲಕ ದೀರ್ಘಕಾಲೀನ ಮತ್ತು ವಿಶಿಷ್ಟವಾದ ಬ್ರ್ಯಾಂಡ್ ಗುರುತನ್ನು ನಿರ್ಮಿಸಬಹುದು.

### 1. ಗುಣಮಟ್ಟದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳಬಾರದು.

ಗ್ರಾಹಕರನ್ನು ಹೊಸ ಉತ್ಪನ್ನ ಅಥವಾ ಆಕರ್ಷಕ ಪ್ರಚಾರವು ಒಮ್ಮೆ ಸೆಳೆಯಬಹುದು. ಆದರೆ, ಅವರು ನಿರಂತರವಾಗಿ ಅದೇ ಬ್ರ್ಯಾಂಡ್‌ನ್ನು ಆಯ್ಕೆ ಮಾಡಬೇಕಾದರೆ ಗುಣಮಟ್ಟವು ಪ್ರತಿಬಾರಿಯೂ ಅವರ ನಿರೀಕ್ಷೆಗಳನ್ನು ಪೂರೈಸಬೇಕು. ಸ್ಥಿರ ಗುಣಮಟ್ಟವು ವಿಶ್ವಾಸವನ್ನು ನಿರ್ಮಿಸುತ್ತದೆ; ವಿಶ್ವಾಸವು ಕ್ರಮೇಣ ನಂಬಿಕೆಯಾಗಿ ಮತ್ತು ನಂಬಿಕೆಯು ಗ್ರಾಹಕ ನಿಷ್ಠೆಯಾಗಿ ರೂಪುಗೊಳ್ಳುತ್ತದೆ.

**2. ವಿಶಿಷ್ಟ ಗುರುತನ್ನು ನಿರ್ಮಿಸಬೇಕು.**

ಪ್ರತಿಯೊಂದು ಸಹಕಾರಿ ಸಂಸ್ಥೆಯೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಅನೇಕ ಸಹಕಾರಿ ಸಂಸ್ಥೆಗಳು ಉತ್ತಮ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುತ್ತಿದ್ದರೂ, ತಮ್ಮನ್ನು ಇತರ ಸಂಸ್ಥೆಗಳಿಂದ ವಿಭಿನ್ನವಾಗಿಸುವ ಅಂಶವನ್ನು ಪರಿಣಾಮಕಾರಿಯಾಗಿ ಗ್ರಾಹಕರಿಗೆ ತಿಳಿಸುವಲ್ಲಿ ಹಿಂದೆ ಬೀಳುತ್ತವೆ.

ರೈತರನ್ನು ಸಬಲೀಕರಣಗೊಳಿಸುವುದು, ಮಹಿಳಾ ನೇತೃತ್ವದ ಉದ್ಯಮಗಳನ್ನು ಉತ್ತೇಜಿಸುವುದು, ಸ್ಥಳೀಯ ಕಲೆ ಮತ್ತು ಸಾಂಪ್ರದಾಯಿಕ ಪದ್ಧತಿಗಳನ್ನು ಸಂರಕ್ಷಿಸುವುದು, ಪರಿಸರ ಸ್ನೇಹಿ ಉತ್ಪಾದನೆ ಅಥವಾ ಸಮುದಾಯದ ಅಭಿವೃದ್ಧಿಗೆ ಕೊಡುಗೆ ನೀಡುವುದು ಇವುಗಳಲ್ಲಿ ಪ್ರತಿಯೊಂದು ಸಹಕಾರಿ ಸಂಸ್ಥೆಯೂ ತನ್ನದೇ ಆದ ವಿಶಿಷ್ಟ ಕಥೆಯನ್ನು ಹೊಂದಿರಬಹುದು.

**3. ಬ್ರ್ಯಾಂಡ್‌ನ ಗೋಚರತೆ ಮುಖ್ಯ.**

ಇಂದಿನ ಡಿಜಿಟಲ್ ಯುಗದಲ್ಲಿ ಗ್ರಾಹಕರು ಉತ್ಪನ್ನವನ್ನು ಅಂಗಡಿಯ ಕಪಾಟಿನಲ್ಲಿ ನೋಡುವುದಕ್ಕಿಂತ ಮುಂಚೆಯೇ ಸಾಮಾಜಿಕ ಮಾಧ್ಯಮ, ಇ–ಕಾಮರ್ಸ್ ವೇದಿಕೆಗಳು ಮತ್ತು ಇತರ ಡಿಜಿಟಲ್ ಮಾಧ್ಯಮಗಳ ಮೂಲಕ ಅದರ ಬಗ್ಗೆ ತಿಳಿದುಕೊಳ್ಳುತ್ತಾರೆ.

ಆದ್ದರಿಂದ ಸಹಕಾರಿ ಸಂಸ್ಥೆಗಳು ತಮ್ಮ ಬ್ರ್ಯಾಂಡ್‌ನ ಗೋಚರತೆಯನ್ನು ಹೆಚ್ಚಿಸಲು ವೃತ್ತಿಪರ ಲೋಗೋ, ಆಕರ್ಷಕ ಪ್ಯಾಕೇಜಿಂಗ್, ಸ್ಪಷ್ಟ ಮತ್ತು ಮಾಹಿತಿಯುಕ್ತ ಲೇಬಲ್‌ಗಳು, ಸಕ್ರಿಯ ಸಾಮಾಜಿಕ ಮಾಧ್ಯಮ ಉಪಸ್ಥಿತಿ, ಇ–ಕಾಮರ್ಸ್ ವೇದಿಕೆಗಳು, ಪ್ರದರ್ಶನಗಳು ಮತ್ತು ಮೇಳಗಳಲ್ಲಿ ಭಾಗವಹಿಸುವಿಕೆ ಮುಂತಾದ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

ಉತ್ತಮ ಉತ್ಪನ್ನವನ್ನು ತಯಾರಿಸುವುದರ ಜೊತೆಗೆ, ಆ ಉತ್ಪನ್ನವು ಗ್ರಾಹಕರಿಗೆ ಸುಲಭವಾಗಿ ಗೋಚರಿಸುವಂತೆ ಮತ್ತು ಲಭ್ಯವಾಗುವಂತೆ ಮಾಡುವುದು ಕೂಡ ಬ್ರ್ಯಾಂಡ್ ನಿರ್ಮಾಣದ ಪ್ರಮುಖ ಭಾಗವಾಗಿದೆ.

**4. ನಾವೀನ್ಯತೆಯನ್ನು ಸಹಕಾರಿ ಸಂಸ್ಕೃತಿಯ ಭಾಗವಾಗಿಸಬೇಕು.**

ನಾವೀನ್ಯತೆ ಎಂದರೆ ಯಾವಾಗಲೂ ದೊಡ್ಡ ಪ್ರಮಾಣದ ಹೂಡಿಕೆ ಅಥವಾ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದೇ ಅಲ್ಲ. ಸಣ್ಣ ಬದಲಾವಣೆಗಳೂ ಸಹ ದೊಡ್ಡ ಪರಿಣಾಮವನ್ನು ಉಂಟುಮಾಡಬಹುದು.

ಉದಾಹರಣೆಗೆ, ಮೌಲ್ಯವರ್ಧಿತ ಉತ್ಪನ್ನಗಳನ್ನು ಪರಿಚಯಿಸುವುದು, ಪರಿಸರ ಸ್ನೇಹಿ ಪ್ಯಾಕೇಜಿಂಗ್ ಬಳಸುವುದು, ಉತ್ಪನ್ನದ ಮೂಲ ಮತ್ತು ಗುಣಮಟ್ಟದ ಮಾಹಿತಿಗಾಗಿ ಡಿಜಿಟಲ್ ಪಾವತಿ ವ್ಯವಸ್ಥೆಗಳನ್ನು ವಿಸ್ತರಿಸುವುದು ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಗ್ರಾಹಕರೊಂದಿಗೆ ನೇರವಾಗಿ ಸಂವಹನ ನಡೆಸುವುದು ಮುಂತಾದ ಕ್ರಮಗಳನ್ನು ಸಣ್ಣ ಸಹಕಾರಿ ಸಂಸ್ಥೆಗಳೂ ಕೈಗೊಳ್ಳಬಹುದು.

ಹೀಗಾಗಿ, ನಾವೀನ್ಯತೆಯನ್ನು ಒಂದು ಪ್ರತ್ಯೇಕ ಯೋಜನೆಯಾಗಿ ನೋಡದೆ, ಸಂಸ್ಥೆಯ ದೈನಂದಿನ ಕಾರ್ಯವೈಖರಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಭಾಗವನ್ನಾಗಿ ಮಾಡಬೇಕು.

**5. ಬ್ರ್ಯಾಂಡಿಂಗ್ ಸಾಮೂಹಿಕ ಜವಾಬ್ದಾರಿಯಾಗಬೇಕು.**

ಬ್ರ್ಯಾಂಡಿಂಗ್ ಕೇವಲ ಮಾರುಕಟ್ಟೆ ಅಥವಾ ಪ್ರಚಾರ ವಿಭಾಗದ ಜವಾಬ್ದಾರಿಯಲ್ಲ. ಸಹಕಾರಿ ಸಂಸ್ಥೆಯ ಪ್ರತಿಯೊಬ್ಬ ಸದಸ್ಯ, ಉದ್ಯೋಗಿ, ಆಡಳಿತ ಮಂಡಳಿ ಸದಸ್ಯ, ಪ್ರತಿನಿಧಿ ಮತ್ತು ಪಾಲುದಾರರು ಸಂಸ್ಥೆಯ ಬ್ರ್ಯಾಂಡ್‌ನ ಪ್ರತಿನಿಧಿಗಳಾಗಿರುತ್ತಾರೆ.

ಗ್ರಾಹಕರೊಂದಿಗೆ ನಡೆಯುವ ಪ್ರತಿಯೊಂದು ಸಂವಹನ, ಉತ್ಪನ್ನದ ಗುಣಮಟ್ಟ, ಸೇವೆಯ ವೇಗ, ವ್ಯವಹಾರದಲ್ಲಿನ ಪಾರದರ್ಶಕತೆ, ನೈತಿಕ ಕಾರ್ಯವಿಧಾನಗಳು ಹಾಗೂ ಕುಂದುಕೊರತೆಗಳ ಪರಿಹಾರ ಇವೆಲ್ಲವೂ ಸಹಕಾರಿ ಸಂಸ್ಥೆಯ ಬ್ರ್ಯಾಂಡ್‌ನ ಮೇಲೆ ಪರಿಣಾಮ ಬೀರುತ್ತವೆ.

ಆದ್ದರಿಂದ, ಜಾಹೀರಾತು ಅಭಿಯಾನಗಳ ಮೂಲಕ ಮಾತ್ರ ಬ್ರ್ಯಾಂಡ್ ನಿರ್ಮಾಣ ಸಾಧ್ಯವಿಲ್ಲ. **ಸಂಸ್ಥೆಯ ಪ್ರತಿಯೊಂದು ಕಾರ್ಯಚಟುವಟಿಕೆಯಲ್ಲೂ ಬ್ರ್ಯಾಂಡ್‌ನ ಮೌಲ್ಯಗಳು ಪ್ರತಿಬಿಂಬಿಸಬೇಕು.

**ಸಹಕಾರಿ ಬ್ರ್ಯಾಂಡ್‌ನ ಬೆಳವಣಿಗೆಯ ಪಯಣ.**

ಬಲಿಷ್ಠ ಬ್ರ್ಯಾಂಡ್‌ಗಳು ಕೇವಲ ಜಾಹೀರಾತುಗಳ ಮೂಲಕ ಬೆಳೆಯುವುದಿಲ್ಲ. ದೂರದರ್ಶನ, ಸಾಮಾಜಿಕ ಮಾಧ್ಯಮ ಅಥವಾ ಇತರ ಪ್ರಚಾರ ಮಾಧ್ಯಮಗಳು ಬ್ರ್ಯಾಂಡ್‌ನ ಬಗ್ಗೆ ಅರಿವು ಮೂಡಿಸಬಹುದು. ಆದರೆ ದೀರ್ಘಕಾಲೀನ ಬ್ರ್ಯಾಂಡ್ ಮೌಲ್ಯವನ್ನು ನಿರ್ಮಿಸುವುದು ಗ್ರಾಹಕರ ನೈಜ ಅನುಭವದಿಂದ.

ಗ್ರಾಹಕರು ಉತ್ಪನ್ನ ಅಥವಾ ಸೇವೆಯಲ್ಲಿ ನಿರಂತರ ಗುಣಮಟ್ಟ, ಪಾರದರ್ಶಕತೆ, ನ್ಯಾಯಸಮ್ಮತ ವ್ಯವಹಾರ ಮತ್ತು ವಿಶ್ವಾಸಾರ್ಹತೆಯನ್ನು ಅನುಭವಿಸಿದಾಗ ವಿಶ್ವಾಸ ಬೆಳೆಯುತ್ತದೆ. ಆ ವಿಶ್ವಾಸವು ಪುನರಾವರ್ತಿತ ಖರೀದಿ, ಗ್ರಾಹಕ ನಿಷ್ಠೆ ಮತ್ತು ದೀರ್ಘಕಾಲೀನ ಸಂಬಂಧಕ್ಕೆ ದಾರಿ ಮಾಡಿಕೊಡುತ್ತದೆ.

**ಉಪಸಂಹಾರ:**

ಸಹಕಾರಿ ಬ್ರ್ಯಾಂಡ್ ಎಂದರೆ ಕೇವಲ ಒಂದು ಹೆಸರು, ಲೋಗೋ ಅಥವಾ ಉತ್ಪನ್ನದ ಗುರುತು ಅಲ್ಲ. ಅದು ಸಹಕಾರಿ ಸಂಸ್ಥೆಯ ಮೌಲ್ಯಗಳು, ಸದಸ್ಯರ ಕೊಡುಗೆ, ಉತ್ಪನ್ನದ ಗುಣಮಟ್ಟ, ಗ್ರಾಹಕರ ಅನುಭವ ಮತ್ತು ಸಮಾಜದ ಮೇಲಿನ ಬದ್ಧತೆಯ ಒಟ್ಟಾರೆ ಪ್ರತಿಬಿಂಬವಾಗಿದೆ.

ಸಹಕಾರಿ ಸಂಸ್ಥೆಗಳು ತಮ್ಮ ಮೂಲ ಮೌಲ್ಯಗಳನ್ನು ಕಾಪಾಡಿಕೊಂಡು, ಗುಣಮಟ್ಟ, ನಾವೀನ್ಯತೆ, ಡಿಜಿಟಲ್ ತಂತ್ರಜ್ಞಾನ ಮತ್ತು ಪರಿಣಾಮಕಾರಿ ಬ್ರ್ಯಾಂಡಿಂಗ್‌ನ್ನು ಅಳವಡಿಸಿಕೊಂಡಾಗ, ಅವು ಮಾರುಕಟ್ಟೆಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಳ್ಳಬಹುದು. ಈ ರೀತಿಯಲ್ಲಿ ನಿರ್ಮಾಣವಾಗುವ ಬ್ರ್ಯಾಂಡ್ ಸಂಸ್ಥೆಗೆ ಮಾತ್ರವಲ್ಲದೆ ಅದರ ಸದಸ್ಯರು, ಗ್ರಾಹಕರು ಮತ್ತು ಅದು ಸೇವೆ ಸಲ್ಲಿಸುವ ಸಮುದಾಯಗಳಿಗೂ ದೀರ್ಘಕಾಲೀನ ಮೌಲ್ಯವನ್ನು ಸೃಷ್ಟಿಸುತ್ತದೆ.

# ಕಾಗೆ ನೀರು ಕುಡಿದ ಹಳೆಯ ಕಥೆ : ಹೊಸ ಪಾಠ

**ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು**

ಒಂದು ಬೇಸಿಗೆಯ ದಿನ, ಹಾರಾಡುತಿದ್ದ ಕಾಗೆಗೆ ಬಿಸಿಲಿನ ತೀವ್ರತೆಯಿಂದ ದೇಹ ಬಳಲಿತ್ತು, ದಾಹ ಹೆಚ್ಚಾಗುತ್ತಿತ್ತು. ಕಾಗೆ ಹಾರುತ್ತಾ.. ಹಾರುತ್ತಾ ಎಲ್ಲೆಡೆ ನೀರನ್ನು ಹುಡುಕಿತು. ಹೊಲಗಳಲ್ಲಿ, ಮರಗಳ ಕೆಳಗೆ, ಬಾವಿಗಳ ಬಳಿ – ಎಲ್ಲೆಯೂ ಒಂದು ಹನಿಯೂ ನೀರು ದೊರೆಯಲಿಲ್ಲ. ದಾಹದಿಂದ ಕಾಗೆಯ ಶಕ್ತಿ ಕುಗ್ಗುತ್ತಿತ್ತು. ಆದರೆ ಅದು ನಿರಾಶೆಯಾಗಲಿಲ್ಲ. ಕೊನೆಗೆ, ಒಂದು ದೊಡ್ಡ ಪೀಪಾಯಿಯಲ್ಲಿ ನೀರಿರುವುದು ಕಾಣಿಸಿತು ಮತ್ತು ಅದರಿಂದ ಕಾಗೆಗೆ ಸಂತೋಷವಾಯಿತು.ಆದರೆ, ಪೀಪಾಯಿಯ ಬಾಯಿ ಚಿಕ್ಕದಾಗಿತ್ತು. ಹಾಗಾಗಿ, ಅಷ್ಟು ತಳದಲ್ಲಿರುವ ನೀರನ್ನು ಹೇಗೆ ಕುಡಿಯುವುದು? ಕಾಗೆ ಹಲವು ಬಾರಿ ತನ್ನ ಚೊಂಚಿನಿಂದ ತಳದವರೆಗೂ ತಲುಪಲು ಪ್ರಯತ್ನಿಸಿತು. ಪೀಪಾಯಿ ಬಾಯಿ ಚಿಕ್ಕದಿದ್ದರಿಂದ ಮತ್ತು ನೀರು ತುಂಬಾ ತಳದಲ್ಲಿರುವುದರಿಂದ ನೀರನ್ನು ತಲುಪುವುದಕ್ಕೆ ಆಗದೆ ಹೋಯಿತು. ದಾಹ ಹೆಚ್ಚಾಗುತ್ತಿತ್ತು, ನಿರಾಶೆ ಆವರಿಸುತ್ತಿತ್ತು. ಕಾಗೆ ಶಾಂತವಾಗಿ ಯೋಚಿಸಿತು. ಸುತ್ತಮುತ್ತಲಿನ ನೆಲದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳು ಬಿದ್ದಿದ್ದವು.ಅದಕ್ಕೆ ಒಂದು ಉಪಾಯ ಹೊಳೆಯಿತು. ಕಾಗೆ ಒಂದೊಂದಾಗಿ ಕಲ್ಲುಗಳನ್ನು ತನ್ನ ಚಂಚಿನಿಂದ ಎತ್ತಿ ಪೀಪಾಯಿಯೊಳಗೆ ಹಾಕತೊಡಗಿತು. ಮೊದಲ ಕಲ್ಲು ನೀರಿನ ಮಟ್ಟವನ್ನು ಸ್ವಲ್ಪ ಮೇಲಕ್ಕೆ ತಂದುಕೊಟ್ಟಿತು. ಮತ್ತೊಂದು ಕಲ್ಲು ಹಾಕಿದಾಗ ನೀರು ಇನ್ನೂ ಸ್ವಲ್ಪ ಮೇಲಕ್ಕೆ ಬಂತು. ಹೀಗೆ ಅನೇಕ ಕಲ್ಲುಗಳನ್ನು ಹಾಕಿದ ನಂತರ, ನೀರು ಪೀಪಾಯಿಯ ಬಾಯಿಯ ಮಟ್ಟಕ್ಕೆ ಬಂದುಹೋಯಿತು. ಕಾಗೆ ಸಂತೋಷದಿಂದ ನೀರನ್ನು ಕುಡಿದು ತನ್ನ ದಾಹ ತಣಿಸಿಕೊಂಡಿತು. ನಂತರ ಹಾರಿಹೋಯಿತು.

ಕಥೆಯ ನೀತಿ "ಉಪಾಯ ಬಲ್ಲವನಿಗೆ ಅಪಾಯವಿಲ್ಲ"

ಈ ಕಥೆಯನ್ನೆ ಇನ್ನೂ Critically examine ಮಾಡಿದಾಗ ಈಗಿನ ಸಂದರ್ಭಕ್ಕೆ ತಕ್ಕಂತೆ ಹಲವಾರು ಪಾಠಗಳು ದೊರೆಯುತ್ತವೆ:

ಸಮಸ್ಯೆಯ ಸ್ಪಷ್ಟತೆ: ಕಾಗೆಗೆ ವಿಪರೀತ ದಾಹ, ಕಣ್ಣೆದುರಲ್ಲಿ ನೀರಿದೆ, ಆದರೆ ಸಾಧ್ಯವಾಗುತ್ತಿಲ್ಲ.ಕಾಗೆಗೆ ಸಮಸ್ಯೆ ಸ್ಪಷ್ಟವಾಗಿ ಅರ್ಥವಾಯಿತು. ಹಾಗಾಗಿ ಪರಿಹಾರವನ್ನು ಹುಡುಕುವುದಕ್ಕೆ ಸುಲಭವಾಯಿತು.ಹಾಗಾಗಿ ಸಮಸ್ಯೆಗಳು ಬಾರದೆ ಇರುವುದಿಲ್ಲ ಆದರೆ ಸಮಸ್ಯೆ ಏನೆಂದು ನಮಗೆ ಸ್ಪಷ್ಟತೆ ಇದ್ದರೆ ಪರಿಹಾರ ಸುಲಭ

ಮಿತಿಯಲ್ಲಿರುವ ಸಂಪನ್ಮೂಲಗಳ ಬಳಕೆ: ಕಾಗೆಗೆ ನೀರು ಕಾಣಿಸಿತು ಆದರೆ ಕುಡಿಯುವುದಕ್ಕೆ ಅಸಾಧ್ಯವಾಯಿತು. ಅದೆ ನೀರನ್ನು ಮೇಲೆ ತರುವುದಕ್ಕೆ ತನ್ನ ಪರಿಸರದಲ್ಲಿಯೆ ಇದ್ದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಪ್ರಯತ್ನಿಸಿತು ಮತ್ತು ಸಫಲವಾಯಿತು.ಹಾಗಾಗಿ, ಏನೂ ಇಲ್ಲ ಎಂದು ದೂರುವುದರಿಂದ ಸಮಸ್ಯೆಗೆ ಪರಿಹಾರಿ ದೊರೆಯುವುದಿಲ್ಲ. ಏನಿದೆಯೊ ಅದನ್ನು ಸರಿಯಾಗಿ ಬಳಸಿಕೊಳ್ಳುವುದೆ ಜಾಣತನ.

**ಹಳೆಯ ಕಥೆ ಆದರೂ ಹೊಸ ಪಾಠಗಳು!**

*********

## 'ಯಾರೋ ನೋಡ್ತಾರೆ' – ಎನ್ನುವ ಭಾವನೆ !

ಸಹಜವಾಗಿ ನಡೆದುಕೊಳ್ಳುತ್ತಿರುವಾಗ ಏಕಾಏಕಿ ಮನಸ್ಸಿನಲ್ಲಿ ಮೂಡುವ ಒಂದು ಅಸ್ಪಷ್ಟ ಅನುಮಾನ "ಯಾರೋ ನನ್ನನ್ನು ನೋಡುತ್ತಿದ್ದಾರೆ, ನನ್ನ ಪ್ರತಿಯೊಂದು ಹೆಜ್ಜೆ, ಮಾತು, ನಗು, ಮೌನವನ್ನು ಅಳೆಯುತ್ತಿದ್ದಾರೆ" ಎನ್ನುವ ಭಾವನೆ ನಮ್ಮ ನಡವಳಿಕೆಯನ್ನು ಜಾಗುರಕತೆಯಿಂದ ಇರುವಂತೆ ನೋಡಿಕೊಂಡರೂ ಅದು ಅತಿಯಾದರೆ ಅಪಾಯವೆ ಹೆಚ್ಚು. ನಮ್ಮನ್ನು ಯಾರೋ ನೋಡುತ್ತಾ ಇದ್ದಾರೆ ಎನ್ನುವುದು ಕೆಲವೊಮ್ಮೆ ಕಣ್ಣಿನ ಚುರುಕಿನಿಂದ, ಮಾತಿನ ಕುಟುಕಿಕೆಯಿಂದ ಹಾಗೂ ಮತ್ತೊಮ್ಮೆ ನಿಶ್ಯಬ್ದದ ತೀವ್ರತೆಯಿಂದ ವ್ಯಕ್ತವಾಗುತ್ತದೆ. ಆ ಕ್ಷಣದಲ್ಲಿ ನಾವು ನಮ್ಮದೆ ನಡವಳಿಕೆಯನ್ನು ತಿದ್ದಿಕೊಳ್ಳಲು ಪ್ರಾರಂಭಿಸುತ್ತೇವೆ. ನಾವು ಸಹಜವಾಗಿ ನಡೆದುಕೊಳ್ಳುತ್ತಿರುವಾಗಲೇ ಏಕಾಏಕಿ ಮೂಡುವ ಈ ಅನುಮಾನ, ನಮ್ಮನ್ನು ತಕ್ಷಣವೇ ಬದಲಾಯಿಸುತ್ತದೆ. "ನಾನು ನಿಜವಾಗಿಯೂ ಸಹಜವಾಗಿದ್ದೇನೆಯೆ?" ಎನ್ನುವ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತದೆ. ಕೆಲವೊಮ್ಮೆ ಇದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ, ಮತ್ತೊಮ್ಮೆ ಆತಂಕವನ್ನು ಉಂಟುಮಾಡುತ್ತದೆ. ಸುಮ್ಮನೆ ನಡೆದು ಹೋಗುವಾಗ ನೋಡಿ ನಮ್ಮ ನಡವಳಿಕೆಯನ್ನು ಯಾರೂ ನೋಡುತಿದ್ದಾರೆ ಅವರು ನಮ್ಮನ್ನು ತೀವ್ರವಾಗಿ ಗಮನಿಸುತಿದ್ದಾರೆ ಎನ್ನುವ ಭಾವನೆ ಬರುತ್ತದೆ.

ಮೂರನೆಯವರು ನೋಡುವುದರ ಹಿನ್ನೆಲೆ ನಮ್ಮ ಮನಸ್ಸಿನಲ್ಲಿ ಒಂದು ವಿಶಿಷ್ಟ ವರ್ತನೆಯನ್ನು ಹುಟ್ಟುಹಾಕುತ್ತದೆ. ನಾವು ಸಹಜವಾಗಿ ನಡೆದುಕೊಳ್ಳುತ್ತಿರುವಾಗಲೇ, ಅವರ ದೃಷ್ಟಿ ನಮ್ಮನ್ನು ತೀವ್ರವಾಗಿ ಅಳೆಯುತ್ತಿದೆ ಎನ್ನುವ ಭಾವನೆ ಮೂಡುತ್ತದೆ. ಆ ದೃಷ್ಟಿ ಕೇವಲ ಕಣ್ಣುಗಳಲ್ಲ, ಅದು ತೀರ್ಪಿನ ಕಣ್ಣುಗಳಾಗಿರಬಹುದು, ಕುತೂಹಲದ ಕಣ್ಣುಗಳಾಗಿರಬಹುದು, ಅಥವಾ ಕೆಲವೊಮ್ಮೆ ಕೇವಲ ನಿರ್ಲಕ್ಷ್ಯದ ಕಣ್ಣುಗಳಾಗಿರಬಹುದು. ಆದರೆ ನಮ್ಮ ಮನಸ್ಸು ಅದನ್ನು ತೀವ್ರವಾಗಿ ಅನುಭವಿಸುತ್ತದೆ. ಈ ಅನುಭವವು ನಮ್ಮ ನಡವಳಿಕೆಯನ್ನು ಬದಲಾಯಿಸುತ್ತದೆ. ನಾವು ನಗುವಾಗ, "ಈ ನಗು ಹೇಗೆ ಕಾಣಿಸುತ್ತಿದೆ?" ಎಂದುಕೊಳ್ಳುತ್ತೇವೆ. ನಾವು ಮಾತಾಡುವಾಗ, "ಈ ಮಾತು ಅವರಿಗೆ ಹೇಗೆ ಕೇಳಿಸುತ್ತಿದೆ?" ಎಂಬ ಆತಂಕ ಮೂಡುತ್ತದೆ. ನಾವು ಮೌನವಾಗಿರುವಾಗ, "ನನ್ನ ಮೌನವನ್ನು ಅವರು ಹೇಗೆ ಅರ್ಥಮಾಡಿಕೊಳ್ಳುತ್ತಾರೆ?" ಎಂಬ ಪ್ರಶ್ನೆ ಮನಸ್ಸನ್ನು ಕಾಡುತ್ತದೆ. ಹೀಗಾಗಿ, ಮೂರನೆಯವರ ದೃಷ್ಟಿ ನಮ್ಮ ಸಹಜತೆಯನ್ನು ಕಳೆದುಹಾಕಿ, ನಮ್ಮನ್ನು ಅಸಹಜತೆಯೊಳಗೆ ತಳ್ಳುತ್ತದೆ. ಮೂರನೆಯವರು ನಮ್ಮನ್ನು ನೋಡುವುದರ ಅರ್ಥವನ್ನು ನಾವು ಯಾವಾಗಲೂ ನಿಜವಾದ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕೆಂದು ಇಲ್ಲ. ಕೆಲವೊಮ್ಮೆ ಅದು ಕೇವಲ ನಮ್ಮ ಮನಸ್ಸಿನ ಭಾವನೆಯ ಪ್ರತಿಫಲವಾಗಿರಬಹುದು. ನಾವು ಸಹಜವಾಗಿ ನಡೆದುಕೊಳ್ಳುತ್ತಿರುವಾಗಲೇ ಏಕಾಏಕಿ ಮೂಡುವ ಅನುಮಾನ"ಯಾರೋ ನನ್ನನ್ನು ಗಮನಿಸುತ್ತಿದ್ದಾರೆ" ಎನ್ನುವುದು ಬಹುಮಟ್ಟಿಗೆ ನಮ್ಮೊಳಗಿನ ಅಜ್ಞಾತ ಭಯ, ಅಜ್ಞಾತ ನಿರೀಕ್ಷೆ, ಅಥವಾ ಅಜ್ಞಾತ ಅಸಹಜತೆಯ ಪ್ರತಿಬಿಂಬ. ನಿಜವಾಗಿ ಯಾರೂ ನಮ್ಮನ್ನು ನೋಡುತ್ತಿರಲಿಲ್ಲವಾದರೂ, ನಮ್ಮ ಮನಸ್ಸು ಆ ಭಾವನೆಯನ್ನು ಕಟ್ಟಿಕೊಳ್ಳುತ್ತದೆ. ಈ ಮನೋಭಾವನೆ ಕೆಲವೊಮ್ಮೆ ನಮ್ಮನ್ನು ಎಚ್ಚರಿಕೆಯಿಂದ ಇರಿಸುತ್ತದೆ. ನಾವು ನಮ್ಮ ನಡವಳಿಕೆಯನ್ನು ತಿದ್ದಿಕೊಳ್ಳುತ್ತೇವೆ, ಮಾತುಗಳನ್ನು ಮರುಪರಿಶೀಲಿಸುತ್ತೇವೆ, ನಗುವನ್ನು ನಿಯಂತ್ರಿಸುತ್ತೇವೆ. ಆದರೆ ಇನ್ನೊಮ್ಮೆ ಅದು ಆತಂಕವನ್ನು ಉಂಟುಮಾಡುತ್ತದೆ "ನನ್ನ ಪ್ರತಿಯೊಂದು ಹೆಜ್ಜೆ ತೀರ್ಪಿಗೆ ಒಳಗಾಗುತ್ತಿದೆ" ಎಂಬ ಭಾವನೆ ನಮ್ಮನ್ನು ಅಸಹಜತೆಯೊಳಗೆ ತಳ್ಳುತ್ತದೆ. ಹೀಗಾಗಿ, ಮೂರನೆಯವರ ದೃಷ್ಟಿ ನಿಜವಾಗಿಯೂ ಇರಬಹುದು, ಅಥವಾ ಅದು ಕೇವಲ ನಮ್ಮ ಮನಸ್ಸಿನ ಕಲ್ಪನೆಯಾಗಿರಬಹುದು.

# ಗ್ರಾಮೀಣ ಅಭಿವೃದ್ಧಿ ಹಾಗೂ ಸಹಕಾರ

– ಶ್ರೀ ಎಸ್.ಆರ್ ಸತೀಶ್ಚಂದ್ರ, ಮಾಜಿ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಪ್ರಸ್ತುತ ಕ್ಯಾಂಪ್ಕೋ ಅಧ್ಯಕ್ಷರು

ಭಾರತ ಹಳ್ಳಿಗಳ ದೇಶ. ದೇಶದ ಶೇಕಡಾ 30% ಜನರು ವ್ಯವಸಾಯವನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಆದ್ದರಿಂದ ಭಾರತ ಕೃಷಿ ಪ್ರಧಾನ ದೇಶ. ಕೃಷಿಕರಿಗೆ ಒಳಿತು ಮಾಡುವ ಕೈಂಕರ್ಯವನ್ನೆ ನಮ್ಮ ಸಹಕಾರಿಗಳು ಮಾಡುತ್ತ ಬಂದಿದೆ. ಸಹಕಾರ ನಮ್ಮ ಗ್ರಾಮೀಣ ಅಭಿವೃದ್ಧಿಗೆ ಬೆನ್ನೆಲುಬು. ಸಹಕಾರ ಕ್ಷೇತ್ರದ ಮೂಲಕ ರೈತರಿಗೆ ಸಾಲ ಹಾಗೂ ವ್ಯವಸಾಯಕ್ಕೆ ಪೂರಕ ಕಸಬುಗಳಿಗೆ ಸೌಲಭ್ಯ ನೀಡುವ ಮೂಲಕ ಕೃಷಿಕರು, ಕೃಷಿ ಉತ್ಪನ್ನ ಹೆಚ್ಚಿಸಲು ಅವಕಾಶವಾಗಿರುವುದರ ಜೊತೆಗೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ನೆರವಾಗಿದೆ.

ಆರ್ಥಿಕ ಅಭಿವೃದ್ಧಿಗೆ ಸಹಕಾರವೇ ಹೆಬ್ಬಾಗಿಲು ಎಂದು ಗಾಂಧೀಜಿಯವರು 1947 ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಹೇಳಿದ್ದು ಸತ್ಯವಾದ ಮಾತು. ನಮಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ನಾವು ಸಹಕಾರಿ ರಂಗವನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಅಂದಿನಿಂದ ಕೇಂದ್ರ ಸರಕಾರ ಇಂದಿನವರೆಗೆ "ಪಂಚವಾರ್ಷಿಕ ಯೋಜನೆ"ಗಳ ಮೂಲಕ ಸಹಕಾರ ಕ್ಷೇತ್ರಕ್ಕೆ ಸಾಲ ಮತ್ತು ಅಗತ್ಯ ಪೂರಕ ಸೌಲಭ್ಯಗಳನ್ನು ಒದಗಿಸುತ್ತ ಬಂದೆ. ಪರಿಣಾಮವಾಗಿ ನಮ್ಮ ದೇಶದ ರೈತ ನೆಮ್ಮದಿಯಿಂದ ವ್ಯವಸಾಯ ಮಾಡಿ ದೇಶದ ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾನೆ. ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದೆ. ಅನ್ಯರಾಜ್ಯಗಳಿಗೂ ಆಹಾರ ಸರಬರಾಜು ಮಾಡುವ ಸಾಮರ್ಥ್ಯ ಲಭ್ಯವಾಗಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದಕ್ಕೆ ಇದೊಂದು ಮಹತ್ವದ ನಿದರ್ಶನ.

ಸಹಕಾರ ನಮ್ಮ ದೇಶಕ್ಕೆ ಹೊಸತಲ್ಲ. ವೇದಕಾಲದಿಂದಲೂ ಸಹಕಾರ ನಮ್ಮ ಉಸಿರು, ಸಮಾಜಿ ಜೀವಿಯಾಗಿ ಸಹಬಾಳ್ವೆಯೇ ನಮ್ಮ ಧ್ಯೇಯ

ನಮ್ಮೆಲ್ಲರ ಉದ್ದೇಶಗಳು ಮತ್ತು ಆಕಾಂಕ್ಷೆಗಳು ಒಂದೇ ಆಗಿರಲಿ, ಆಗ ಒಂದು ಸಾಮಾನ್ಯ ಉದ್ದೇಶ ನಮ್ಮೆಲ್ಲರನ್ನೂ ಒಂದುಗೂಡಿಸುತ್ತದೆ.

ಆದರೆ ಆರ್ಥಿಕ ರೂಪದಲ್ಲಿ ಸಹಕಾರ ಚಳುವಳಿಯಾಗಿ ಬೆಳೆದು ಬಂದುದು ಒಂದು ಇತಿಹಾಸ. 1844 ರಲ್ಲಿ ಇಂಗ್ಲೆಂಡ್‌ನಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಶ್ರೀಮಂತರು ಮತ್ತು ಬಡವರ ಮಧ್ಯೆ ಅಂತರ ಹೆಚ್ಚಾಗಿ ಶ್ರೀಮಂತರು ಹೆಚ್ಚು ಶ್ರೀಮಂತರಾಗಿ ಬಡವರು ಹೆಚ್ಚು ಬಡವರಾಗಿ, ಬಡವರ ಬಾಳು ಅತ್ಯಂತ ದುಸ್ಥಿರ ಪರಿಸ್ಥಿತಿಗೆ ಬಂದಿತು. ಆ ಸಮಯದಲ್ಲಿ ಸಮಾಜ ಸುಧಾರಕ "ರಾಬರ್ಟ್ ಓವನ್" ರವರ ಮಾರ್ಗದರ್ಶನದಲ್ಲಿ ರಾಕಡೇಲ್ ಎಂಬ ಊರಿನಲ್ಲಿ 28 ಜನ ಬಡ ನೇಕಾರರು ಸೇರಿ ವಿಶ್ವದ ಪ್ರಪ್ರಥಮ ಗ್ರಾಹಕರ ಸಹಕಾರ ಸ್ಟೋರ್‌ನ್ನು ಸ್ಥಾಪಿಸಿದರು. ಪರಿಣಾಮವಾಗಿ ಅವರಿಗೆ ಬದುಕಿನಲ್ಲಿ ಒಂದು ಹೊಸ ಆಯಾಮ ಪ್ರಾರಂಭವಾಗಿ ಅವರ ಆರ್ಥಿಕ ಸ್ಥಿತಿಗತಿಯಲ್ಲಿ ಬದಲಾವಣೆ ಕಂಡಿತು. ಪ್ರಥಮ ಗ್ರಾಹಕರ ಸಹಕಾರ ಸ್ಟೋರ್‌ನ್ನು ಅವರೆಲ್ಲ ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ ಎಂಬ ಸಹಕಾರದ ತತ್ವದ ಆಧಾರದ ಮೇಲೆ ನಡೆಸುತ್ತ 1852ರ ವೇಳೆಗೆ ಒಂದು ದೊಡ್ಡ ಡಿಪಾರ್ಟ್‌ಮೆಂಟಲ್ ಸ್ಟೋರ್ ಆಗಿ ಬೆಳೆಯಿತು. ಅವರು ನಡೆದು ಬಂದ ದಾರಿಯ ಅನುಭವಗಳೇ ಸಹಕಾರ ತತ್ವಗಳಾಗಿ ಇಂದಿನ ಎಲ್ಲ ಸಹಕಾರಿ ಸಂಘಗಳಿಗೆ ಮಾರ್ಗದರ್ಶನ ನೀಡುವಂತಾಗಿದೆ.

ಭಾರತದಲ್ಲಿ 1904 ರಲ್ಲಿ ಭಾರತ ಬಿಟಿಷ್ ಸರ್ಕಾರದ ಕಾನೂನು ಪ್ರಾರಂಭಿಸುವ ಮೂಲಕ ರೈತರಿಗೆ ಸಾಲಬಾಧೆಯಿಂದ ಮುಕ್ತಿ ಒದಗಿಸುವ ಕ್ರಿಯೆ ಪ್ರಾರಂಭವಾಯಿತು. ಇನ್ನೂ ಹೆಚ್ಚು ಹಾಗೂ ಎಲ್ಲ ವಿಧವಾದ ಸಂಘಗಳ ಸ್ಥಾಪನೆಯ ಅಗತ್ಯತೆಯ ಹಿನ್ನಲ್ಲೆಯಲ್ಲಿ ಸಹಕಾರಿ ಕಾನೂನನ್ನು 1912, 1919ರಲ್ಲಿ ಮತ್ತೆ ತಿದ್ದುಪಡಿ ಮಾಡಲಾಯಿತು. ಸಹಕಾರ ರಾಜ್ಯಗಳ ವಿಷಯವಾಯಿತು. 1935 ರಲ್ಲಿ ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಯಾಗಿ ಕೃಷಿ ವಿಭಾಗದ ಮೂಲಕ ಸಹಕಾರ ಸಂಘಗಳಿಗೆ ಆರ್ಥಿಕ ನೆರವು ನೀಡುತ್ತ ಗ್ರಾಮೀಣ ಅಭಿವೃದ್ಧಿಗೆ ಆಸರೆಯನ್ನಾಗಿಸಲಾಯಿತು. 1947 ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 1952 ಅಂದಿನ ಕೇಂದ್ರ ಸರಕಾರ ಈ ದೇಶದ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಬೆನ್ನೆಲುಬು. ಇದುವರೆಗೆ ಈ ಕ್ಷೇತ್ರದ ಮೂಲಕ ಸಾಧಿಸಲಾದ ಪ್ರಗತಿಯನ್ನು ಸಮೀಕ್ಷೆ ಮಾಡಬೇಕೆಂದು ಮುಂದಿನ ದಿನಗಳಲ್ಲಿ ಈ ಸಹಕಾರ ಕ್ಷೇತ್ರವನ್ನು ಬಲಪಡಿಸಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಮನಗಂಡು ಶ್ರೀ ಎ.ಡಿ ಗೋರವಾಲಾ ಎಂಬ ರಿಸರ್ವ್ ಬ್ಯಾಂಕಿನ ಹಿರಿಯ ಅಧಿಕಾರಿಗಳಿಂದ ಸರ್ವೆ ಮಾಡಿಸಲಾಯಿತು. ಶ್ರೀಯುತರು ದೇಶವ್ಯಾಪಿ ಸಂಚರಿಸಿ ಸಹಕಾರಿಗಳನ್ನು ಭೇಟಿ ಮಾಡಿ ಈ ಕ್ಷೇತ್ರದ ಅಧ್ಯಯನ ಮಾಡಿ "ಭಾರತದಲ್ಲಿ ಸಹಕಾರ ಕ್ಷೇತ್ರ ವಿಫಲವಾಗಿದೆ ಆದರೆ ಇದು ಸಫಲವಾಗಲೇಬೇಕು"ಎಂದು ವರದಿ ನೀಡಿದರು. ಮತ್ತು ಹಲವಾರು ಸಲಹೆ ನೀಡಿದರು. ನಂತರದಲ್ಲಿ ಅವರ ಸಲಹೆಗಳನ್ನು ಸರಕಾರ ಒಪ್ಪಿತು. ಸರಕಾರ ಕ್ಷೇತ್ರದಲ್ಲಿ ಹಣಕಾಸಿನ ನೆರವಿಗೆ ಮುಂದಾಯಿತು.

1956ರಲ್ಲಿ ರಾಜ್ಯಗಳ ಪುನರ್ವಿಂಗಡನೆಯಾದ ನಂತರ ಕರ್ನಾಟಕದಲ್ಲಿ ಹಳೆಯ ಮೈಸೂರು ಪ್ರಾಂತ, ಮುಂಬಯಿ ಪ್ರಾಂತ, ಹೈದರಾಬಾದ ಕರ್ನಾಟಕ ಪ್ರಾಂತ ಮತ್ತು ಮದ್ರಾಸ್ ಪ್ರಾಂತ್ಯಗಳಿಂದ ಒಟ್ಟಾರೆ 19 ಜಿಲ್ಲೆಗಳನ್ನು ಸೇರಿ ಕರ್ನಾಟಕ ರಾಜ್ಯ ಉದಯವಾಯಿತು. ಎಲ್ಲ 4 ಪ್ರಾಂತ್ಯಗಳಲ್ಲಿ ಅಸ್ತಿತ್ವದಲ್ಲಿ ಸಹಕಾರ ಕಾಯ್ದೆಗಳನ್ನು ಒಂದಾಗಿಸಿ 1959 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯನ್ನು ಜಾರಿ ಮಾಡಲಾಯಿತು. 1960ರಲ್ಲಿ ನಿಯಮಗಳನ್ನು ರಚಿಸಲಾಯಿತು.

ಗ್ರಾಮೀಣ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು ಎಂಬುದಕ್ಕೆ ಸಾಕ್ಷಿಯಾಗಿ ವಿಶ್ವದಲ್ಲಿ 30 ಲಕ್ಷ ಸಹಕಾರಿ ಸಂಘಗಳು, ಭಾರತದಲ್ಲಿ 8 ಲಕ್ಷ ಸಹಕಾರಿ ಸಂಘಗಳು, ಕರ್ನಾಟಕದಲ್ಲಿ 46000 ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ವಿಶ್ವಸಂಸ್ಥೆಯವರು ಈ ಸಹಕಾರ ಕ್ಷೇತ್ರದ ಸಾಧನೆ ಹಾಗೂ ಪ್ರಗತಿ ಮತ್ತು ಅದರ ಅವಶ್ಯಕತೆಯನ್ನು ಮನಗಂಡು ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುತ್ತವೆ ಎಂಬುದಾಗಿ ಘೋಶಿಸಿದ್ದಾರೆ. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ಸಹಕಾರ ಸಂಸ್ಥೆಗಳು ಕಷ್ಟಕಾಲದಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬುದಾಗಿ ಆತ್ಮವಿಶ್ವಾಸದಿಂದ ಜಗತ್ತಿಗೆ ಸಾರಿದರು. ಇದಲ್ಲದೆ 2012 ರಿಂದ 2020 ರವರೆಗೆ ಸಹಕಾರ ದಶಕವೆಂದು ಘೋಷಣೆ ಮಾಡಿದರು. 2012ರ ನಂತರ 2025ನ್ನು ಅಂತರರಾಷ್ಟ್ರೀಯ "ಸಹಕಾರ ವರ್ಷ"ವೆಂದು ಸಾರಿದರು. ಇವೆಲ್ಲವುಗಳ ಪರಿಣಾಮವಾಗಿ ಸಹಕಾರ ಕ್ಷೇತ್ರ ಅತ್ಯಂತ ಬಲಿಷ್ಠವಾಗಿ ಬೆಳೆಯುತ್ತ ಗ್ರಾಮೀಣ ಬದುಕಿಗೆ ಕಲ್ಪವೃಕ್ಷ ಕಾಮಧೇನುವಿನಂತೆ ಕಾರ್ಯ ನಿರ್ವಹಿಸುತ್ತಿರುವುದು ಇಂತಹ ಆಧುನಿಕ ತಂತ್ರಜ್ಞಾನ ಯುಗದಲ್ಲಿಯೂ ಸಹಕಾರದ ಅಗತ್ಯತೆಯನ್ನು ಸಾರುತ್ತಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Permitted to Post under Periodical Post as per the Letter G3/14/RNP/2024-25 DATE 29.09.2025

ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (PACS) ಹಾಲು ಉತ್ಪಾದಕ ಸಹಕಾರಿ ಸಂಘಗಳು, ಮಾರಾಟ ಸಹಕಾರಿ ಸಂಘಗಳು ಗಣನೀಯ ಕೊಡುಗೆ ನೀಡಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಮತ್ತು ಹಾಲು ಉತ್ಪಾದಕ ಸಹಕಾರಿ ಸಂಘಗಳಲ್ಲಿ ಈ ಕೆಳಕಂಡ ಪ್ರಗತಿಯನ್ನು ನಾವು ಕಾಣಬಹುದಾಗಿದೆ.

1. ಸಾಲ ಮತ್ತು ಸೇವಿಂಗ್ಸ್. 2. ರಾಸಾಯನಿಕ ಸಾವಯವ ಗೊಬ್ಬರಗಳ ಹಂಚುವಿಕೆ (Distribution) 3. ಕ್ರಿಮಿ ನಾಶಕ, ಕೃಷಿ ಉಪಕರಣಗಳ ಮಾರಾಟ, ಮಾಹಿತಿ. 4. ಪಡಿತರ ಸಾಮಾಗ್ರಿಗಳ ವಿತರಣೆ. 5. ಸರಕಾರದ ಸವಲತ್ತುಗಳ ವಿತರಣೆ, ಮಾಹಿತಿ. 6. ಕೃಷಿಕರಿಗೆ ತಾಂತ್ರಿಕ ಮಾಹಿತಿ, ಶಿಕ್ಷಣ, ಪ್ರವಾಸ. 7. ಸಹಕಾರ ಶಿಕ್ಷಣ, ಸಮಾನತೆ, ಪ್ರಚಾರ. 8.ಉದ್ಯೋಗವಕಾಶಗಳು. 9. ಕೃಷಿ ಉತ್ಪನ್ನಗಳಿಗೆ ದಾಸ್ತಾನು ಕೊಠಡಿ, ಮಾರುಕಟ್ಟೆ ವ್ಯವಸ್ಥೆ. 10. ದಿನ ನಿತ್ಯ ಹಾಲಿನ ಸಂಗ್ರಹ, ಹಣದ ವರ್ಗಾವಣೆ. 11. ದನಗಳಿಗೆ ಬೇಕಾದ ಮೇವು, ಫೀಡ್, ಔಷದಿಗಳ ವಿತರಣೆ. 12. ತಾಂತ್ರಿಕ ಮಾಹಿತಿ, ಶಿಕ್ಷಣ, ಪ್ರವಾಸ. 13. ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಆಡಳಿತ. 14. ಪಾರದರ್ಶಕ ಲೆಕ್ಕಪರಿಶೋಧನೆ, ಮಹಾಸಭೆ, ಐದು ವರ್ಷಕೊಮ್ಮೆ ಚುನಾವಣೆ. 15. ಗ್ರಾಮೀಣ ಭಾಗದ ನಾಯಕತ್ವಕ್ಕೆ ಅವಕಾಶ.

ಮೇಲಿನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಹಕಾರಿಗಳು ನಿರ್ವಹಿಸಿರುವುದರಿಂದ ಹಸಿರು ಕ್ರಾಂತಿ (Green Revolution), ಹಾಲಿನ ಕ್ರಾಂತಿಗೆ) ದೊಡ್ಡ ಕೊಡುಗೆಯನ್ನು ನೀಡಿದೆ. ಆಹಾರ ಉತ್ಪನ್ನಗಳಲ್ಲಿ ಹಾಲಿನ ಉತ್ಪಾದನೆಯಲ್ಲಿ ಜಗತ್ತಿನ ಮುಂಚೂಣಿ ರಾಷ್ಟ್ರವಾಗಿ ಮೂಡಿ ಬಂದಿದೆ.

ಸಹಕಾರ ಕ್ಷೇತ್ರದ ಪರಿಣಾಮಕಾರಿ ಸಾಧನೆಗಾಗಿ ಸರಕಾರದ ನಿಯಂತ್ರಣ, ಹಸ್ತಕ್ಷೇಪ ನಿವಾರಣೆ ಅಗತ್ಯ ಎಂಬುದನ್ನು ಅರಿತ ಕೇಂದ್ರ ಸರಕಾರ 1981 ರಲ್ಲಿ ಅರ್ಥಶಾಸ್ತ್ರಜ್ಞ ಅರ್ಧನಾರೀಶ್ವರ ಕಮೀಟಿಯವರ ಶಿಫಾರಸ್ಸಿನಂತೆ, ಕೇಂದ್ರ ಯೋಜನಾ ಆಯೋಗದವರು ಸ್ವಾಯತ್ತ ಸಹಕಾರ ಕಾಯ್ದೆಯನ್ನು ಚೌಧರಿ ಬ್ರಹ್ಮಪ್ರಕಾಶರವರು ಸಿದ್ಧಪಡಿಸಿರುವುದನ್ನು ಎಲ್ಲ ರಾಜ್ಯಗಳಿಗೂ ಕಳುಹಿಸಿರುವಂತೆ ಕರ್ನಾಟಕದಲ್ಲೂ ಕಳುಹಿಸಲಾಯಿತು. ಕರ್ನಾಟಕದಲ್ಲಿ "ಸೌಹಾರ್ದ ಸಹಕಾರಿ ಕಾಯ್ದೆ" ಯನ್ನು 1989ರಲ್ಲಿ ಕರ್ನಾಟಕ 2 ಸದನಗಳಲ್ಲಿ ಅನುಮೋದನೆ ನಂತರ ರಾಜ್ಯಪಾಲರು, ರಾಷ್ಟ್ರಪತಿಗಳ ಅಂಗೀಕಾರವಾದ ನಂತರ 01.01.2001 ರಲ್ಲಿ ಜಾರಿಗೆ ಬಂದಿದೆ. ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಧ್ಯೇಯದಿಂದ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಚಳುವಳಿ ಇದೀಗ "ನವಯುಗದ ಯುವ ಸಹಕಾರಿಗಳು" ಎಂದು ಕರೆಯಲಾಗುತ್ತಿದೆ. ಈ ಕ್ಷೇತ್ರದಲ್ಲಿ 6800ಕ್ಕೂ ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ 75 ಲಕ್ಷ ಸದಸ್ಯರನ್ನು ಹೊಂದಿದೆ. 1 ಲಕ್ಷ ಜನರಿಗೆ ಉದ್ಯೋಗ ನೀಡಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ರಾಷ್ಟ್ರದ ಸಹಕಾರಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಿವೆ. ವಿಭಿನ್ನವಾಗಿದೆ ವೈಶಿಷ್ಟಪೂರ್ಣವಾಗಿ ಕಾರ್ಯನಿರ್ವಹಿಸುತ್ತಿರುವುದು ಸಹಕಾರಿಗಳ ವಿಶೇಷವಾಗಿ ಈ ರಾಜ್ಯಕ್ಕೆ ಈ ಕಾಯ್ದೆಯನ್ನು ಜಾರಿ ಮಾಡಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಪ್ರೋತ್ಸಾಹಿಸುತ್ತಿರುವುದು ಸರಕಾರದ ಹೆಮ್ಮೆಯ ವಿಷಯ.

ಈ ಕ್ಷೇತ್ರದ ಮಹತ್ವವನ್ನು ಅರಿತ ಕೇಂದ್ರ ಸರಕಾರ ಜೂನ್ 2021 ರಲ್ಲಿ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಪ್ರಾರಂಭಿಸಿದೆ. ತನ್ಮೂಲಕ 56 ಕ್ಕಿಂತಲೂ ಹೆಚ್ಚು ಕಾರ್ಯಕ್ರಮಗಳನ್ನು ಈ ದೇಶದಲ್ಲಿ ಚಾಲನೆ ನೀಡಿದೆ. ಅದರಲ್ಲಿ ಪ್ರಮುಖವಾಗಿ ಈ ದೇಶಕ್ಕೆ "ರಾಷ್ಟ್ರೀಯ ಸಹಕಾರ ನೀತಿ" "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ", ಗ್ರಾಮಕ್ಕೊಂದು ಕೃಷಿ ಸಹಕಾರ ಸಂಘಗಳ ಸ್ಥಾಪನೆ, ಮುಂತಾದವುಗಳು ಸಹಕಾರ ಕ್ಷೇತ್ರದ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಚಾಲನೆ ನೀಡಿವೆ. ಗ್ರಾಮೀಣ ಭಾರತವೇ ನಿಜವಾದ ಭಾರತ. ಗ್ರಾಮೀಣ ಅಭಿವೃದ್ಧಿಯೇ ಸಹಕಾರದ ಮುಖ್ಯ ಆಶಯ.

**ಜೈ ಹಿಂದ್**

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

**ಇವರಿಗೆ,**

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003